॥ ಶ್ರೀ ದಿಗ್ವಿಜಯರಾಮೋ ವಿಜಯತೇ ॥

ಸುಶೀಲಾ
ಪ್ರಕಾಶನದ
41ನೇ ಪುಷ್ಪ

ಶ್ರೀ ಸತ್ಯವಿಜಯತೀರ್ಥರ ಮಹಿಮಾ ವೈಭವ



ಶ್ರೀ ಸತ್ಯವಿಜಯತೀರ್ಥರ ವೃಂದಾವನ, ಸತ್ಯವಿಜಯನಗರ, ಆರಣಿ

ಆರಾಧನೆ : ಚೈತ್ರ ಬಹುಳ ಏಕಾದಶಿ

ಲೇಖಕರು : ಎಸ್.ಕೆ. ಬದರೀನಾಥ್

ಶ್ರೀ ಟೀಕಾಕೃತ್ಪಾದರು, ಮಳಖೇಡ

ಶ್ರೀ ದಿಗ್ವಿಜಯರಾಮೋ ವಿಜಯತೇ

ಸಮರ್ಪಣೆ

ನನ್ನದಾಗಿ ಏನೂ ಇಲ್ಲ, ನಾನು ಬರೆದಿದ್ದಲ್ಲ. ನನ್ನ ಕುಲಗುರುಗಳಾದ ಶ್ರೀ ಸತ್ಯಪರಾಯಣ ತೀರ್ಥಾಂತರ್ಗತ ಶ್ರೀ ಸೀತಾರಾಮಚಂದ್ರ ಪ್ರಭುವು ನನ್ನಲ್ಲಿ ನಿಂತು, ಬರೆದು ಬರೆಸಿದ ಕೃತಿ, ಈ ಕೃತಿ. ಇದನ್ನು ನನ್ನ **ವಿದ್ಯಾಗುರುಗಳಾದ ಡಾ. ಶ್ರೀ ಸತ್ಯಧ್ಯಾನಾಚಾರ್ಯಕಟ್ಟಿಯವರ ಚರಣಗಳಲ್ಲಿ ಅರ್ಪಿಸಿದ್ದೇನೆ.**

ಎರಡು ಮಾತು

ಶ್ರೀ ಪರಶುರಾಮದೇವರು 21 ಸಾರ್ತಿ ವಿಶ್ವಪರ್ಯಟನೆ ಮಾಡಿ ದುಷ್ಟರ ಸಂಹಾರಗೈದಂತೆ, ದ್ವೈತಸಿದ್ಧಾಂತ ಪ್ರವರ್ತಕರಾದ ಶ್ರೀ ಮಧ್ವಾಚಾರ್ಯರು 21 ಕುಭಾಷ್ಯಗಳನ್ನು ಖಂಡಿಸಿ ಬ್ರಹ್ಮಸೂತ್ರಗಳಿಗೆ ಸರಿಯಾಗಿ ಅರ್ಥೈಸುವ ಭಾಷ್ಯವನ್ನು ಬರೆದು ಅದಕ್ಕೆ ಅನುಗುಣವಾಗಿ ಬರೆದ ವ್ಯಾಖ್ಯಾನ ಅನುವ್ಯಾಖ್ಯಾನ. ಇಂತಹ ಶ್ರೇಷ್ಠವಾದ ಕೃತಿಯನ್ನು ಬರೆದ ಶ್ರೀಮಧ್ವಾಚಾರ್ಯರ ಮೂಲ ಮಠವಾದ ಶ್ರೀ ಮದುತ್ತರಾದಿಮಠದ ಯತಿಶ್ರೇಷ್ಠರ ವಾಹಿನಿಯಲ್ಲಿ ಬಂದ ಯತಿಕುಲಲಲಾಮರು, ಯತಿಪುಂಗವರು **ಶ್ರೀ ಸತ್ಯವಿಜಯತೀರ್ಥರು**. ಇವರ ಮಹಿಮೆಯನ್ನು ಹೊತ್ತು ತಂದಿರುವ ಕೃತಿ "**ಶ್ರೀ ಸತ್ಯವಿಜಯತೀರ್ಥರು.**"

ಶ್ರೀ ಸತ್ಯವಿಜಯತೀರ್ಥರ ಬೃಂದಾವನವಿರುವ ಸತ್ಯ ವಿಜಯನಗರಕ್ಕೂ ಶ್ರೀಮದುತ್ತರಾದಿಮಠಕ್ಕೂ ಒಂದು ವಿಶಿಷ್ಟವಾದ ಸಂಬಂಧ. ನನ್ನ ಯಾವ ಜನ್ಮದ ಪುಣ್ಯವೋ, ಸ್ವಾಮಿಗಳ ಬೃಂದಾವನದೆದುರು ಒಂದು ಹಿಡಿ ಮಂತ್ರಾಕ್ಷತೆಯನ್ನು ಪಡೆಯುವ ಸೌಭಾಗ್ಯದೊರೆಯಿತು. ಕಾರ್ಖಾನೆಯಲ್ಲಿ ದುಡಿದು, ವಕೀಲ ವೃತ್ತಿ ಕೈಗೊಂಡವನ ಕೈಯಲ್ಲಿ ಗುರುಗಳ ಮಹಾತ್ಮೆಯನ್ನು ಬರೆದು, ಬರೆಸುತ್ತಿರುವವರು, **ಶ್ರೀ ಸತ್ಯಪರಾಯಣತೀರ್ಥರು. ಇದು ನಮ್ಮ ಸಂಸ್ಥೆಯ 41ನೇ ಹೊತ್ತಿಗೆಯಾಗಿದೆ.**

ಶ್ರೀ ರಾಮಶಬ್ದಾರ್ಥ ರತ್ನಮಾಲಾ (ಶ್ರೀ ಸತ್ಯಪರಾಯಣತೀರ್ಥ ವಿರಚಿತ)ವನ್ನು ಒಂದು ಪ್ರಥಮೇಕಾದಶಿಯಂದು ಕೊಂಡು ಓದಲು ಪ್ರಾರಂಭಿಸಿದ ಮೇಲೆ ಶ್ರೀ ಸತ್ಯಪರಾಯಣತೀರ್ಥರು ಪ್ರೇರಕರಾಗಿ ಸುಮಾರು 28 ಗುರುಗಳ ಜೀವನ ಚರಿತ್ರೆ

ಯನ್ನು ಬರೆಯಲು ಅನುಗ್ರಹಿಸಿದ್ದಾರೆ. ಈ ಪುಸ್ತಕಗಳನ್ನು ದೇವತಾಕಾರ್ಯ ಹಾಗೂ ಗುರುಗಳ ಸೇವೆಯೆಂದು ಉಚಿತವಾಗಿ ವಿತರಿಸಲಾಗುತ್ತಿದೆ. ಮೊದಮೊದಲು ಪುಸ್ತಕದ ಮುದ್ರಣದ ಖರ್ಚನ್ನು ನಾನೇ ಭರಿಸಿದರೂ, ಕ್ರಮೇಣ ಕೆಲವು ಮಹನೀಯರು ತಾವಾಗಿಯೇ ಮುಂದೆ ಬಂದು ಅವರ ತಂದೆ, ತಾಯಿ, ಹಿರಿಯರ ಹೆಸರಿನಲ್ಲಿ ಹಾಗೂ ಕೆಲವರು ಅವರ ವಿವಾಹ, ಜನ್ಮದಿನೋತ್ಸವದ ಸಂದರ್ಭದಲ್ಲಿ ಮುದ್ರಣದ ಖರ್ಚನ್ನು ಭರಿಸಿ ಪ್ರಕಾಶನಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಅವರಿಗೆ ಅಭಾರಿಯಾಗಿದ್ದೇನೆ. **ಈಗಾಗಲೇ ಪ್ರಕಾಶನವಾಗಿರುವ ಗುರುಗಳ ಚರಿತ್ರೆಯನ್ನು ಹೊರತುಪಡಿಸಿ, ಪ್ರಕಾಶನಗೊಳ್ಳಬೇಕಾದ ಶ್ರೀಮಠದ ಯತಿಪರಂಪರೆಯ ಜೀವನ ಚರಿತ್ರೆಯನ್ನು ಮುದ್ರಿಸಲು ಮಹನೀಯರು ಮುಂದೆ ಬಂದರೆ ತ್ವರಿತ ಗತಿಯಲ್ಲಿ ಈ ಕಾರ್ಯವು ಮುಗಿಯುತ್ತದೆ.**

ನನ್ನ ಬಹಳಷ್ಟು ಪುಸ್ತಕಗಳಿಗೆ ಮುನ್ನುಡಿಯನ್ನು ದಯಪಾಲಿಸುತ್ತಿರುವ ಹಾಗೂ ಮುಂದೆಯೂ ದಯಪಾಲಿಸುವ ಡಾ॥ ಶ್ರೀ ಸತ್ಯಧ್ಯಾನಾಚಾರ್ಯ ಕಟ್ಟಿಯವರ ಪಾದಾರ ವಿಂದಗಳಲ್ಲಿ ಶಿರಸಾಷ್ಟಾಂಗ ನಮಸ್ಕಾರಗಳು. ನನ್ನ ಯಾವತ್ತು ಕಾರ್ಯಗಳಿಗೂ ಬೆನ್ನೆಲುಬಾಗಿ ಸಹಕರಿಸುತ್ತಿರುವ ಧರ್ಮಪತ್ನಿ ಸುಮನಾ ಬದರೀನಾಥಳಿಗೂ ಶ್ರೀ ಸತ್ಯವಿಜಯತೀರ್ಥರ ಹೃದಯಕಮಲ ನಿವಾಸಿ ಶ್ರೀ ರಾಮ, ಸೀತಾದೇವಿಯರು ಸನ್ಮಂಗಳವನ್ನೀಡಲಿ.

ಕೊಡುಗೈ ದೊರೆಗಳಾದ ಶ್ರೀ ಸತ್ಯಪ್ರಿಯತೀರ್ಥರ ಗುರುಗಳಾದ ಶ್ರೀ ಸತ್ಯವಿಜಯತೀರ್ಥರು ನನ್ನ ಮಕ್ಕಳಾದ ಎಸ್.ಬಿ. ಅನುರಾಧ, ಎಸ್.ಬಿ. ವಸುಧ, ಡಾ॥ ಎಸ್.ಬಿ.ಎ. ಸಂಧ್ಯಾ ಅವರ ಭರ್ತರುಗಳಾದ ಕೆ.ಎ. ಉಮೇಶ್, ಜಿ.ಎ. ವೆಂಕಟೇಶ್, ಕೆ.ಎಸ್. ಗಿರೀಶ್ ಅವರುಗಳಿಗೆ, ಅವರ ಮಕ್ಕಳಿಗೆ ಆಯುರಾರೋಗ್ಯ, ಸಂಪತ್ತನ್ನು ಅನುಗ್ರಹಿಸಲಿ.

ಕೊನೆಯದಾಗಿ ನನ್ನ ಯಾವತ್ಕಾರ್ಯಗಳಿಗೂ, ಬದುಕಿದ್ದಾಗಲೂ, ಈಗಲೂ, ಮುಂದೆಯೂ ದಾರಿದೀಪವಾಗಿರುವ ನನ್ನ ತಾಯಿ **ಶ್ರೀಮತಿ ಸುಶೀಲಾಬಾಯಿಗೂ** (ನಾಗಮ್ಮನಿಗೂ) ಹಾಗೂ ಜನ್ಮದಾತ **ಶ್ರೀ ಕೃಷ್ಣಮೂರ್ತಿ**ಯವರ ಚರಣಾರವಿಂದಕ್ಕೆ ಸಹಸ್ರ ಸಹಸ್ರ ನಮಸ್ಕಾರಗಳು. ಈ ಹೊತ್ತಿಗೆಯನ್ನು ಬರೆಯಲು ಬಹಳಷ್ಟು ಗ್ರಂಥಗಳನ್ನು ಬಳಸಿಕೊಂಡಿರುವೆನು. ಅವರಿಗೆಲ್ಲಾ ಋಣಿ.

ಬೆಂಗಳೂರು
06–09–2011

–ಎಸ್.ಕೆ. ಬದರೀನಾಥ್
(ಸದರಮಿನ್)

ಶ್ರೀ ಮೂಲರಾಮೋ ವಿಜಯತೇ

ಶ್ರೀಸತ್ಯವಿಜಯತೀರ್ಥರ ಮಹಿಮಾ ವೈಭವ

ಶ್ರೀ ಮನ್ಮಧ್ವಮತೇ ಹರಿಃ ಪರತರಃ ಸತ್ಯ ಜಗತ್ತತ್ವತೋ
ಭಿನ್ನ ಜೀವಗಣಾ ಹರೇರನುಚರಾನೀಚೋಚ್ಚ ಭಾವಂ ಗತಾಃ
ಮುಕ್ತಿರ್ನೈಜ–ಭೂತಿರಮಾಲಾ ಭಕ್ತಿಶ್ಚ ತತ್ಸಾಧನಂ
ಹ್ಯಕ್ಷಾದಿತ್ರಿತಯಂ ಪ್ರಮಾಣಮಖಿಲಾಮ್ನಾಯೈಕ ವೇಧ್ಯೋ ಹರಿಃ।

1. ಹರಿಯು ಸರ್ವೋತ್ತಮ 2. ಈ ಪ್ರಪಂಚಸತ್ಯ 3. ಭೇದಸತ್ಯ 4. ಜೀವ ಅಸ್ವತಂತ್ರ, ಶ್ರೀಹರಿಯ ಅಧೀನ 5. ಜೀವರಲ್ಲಿ ಶ್ರೇಷ್ಟ ಮತ್ತು ಕನಿಷ್ಟ ಎಂಬ ತಾರತಮ್ಯವಿದೆ, 6. ಜೀವರು ಪರಮಾನಂದವನ್ನು ಹೊಂದುವುದು ಸಹಜ ವಾದದ್ದು ಮುಕ್ತಿ, 7. ನಿರ್ಮಲವಾದ ಭಕ್ತಿಯೇ ಮುಕ್ತಿಗೆ ಕಾರಣ, 8. ಸಂಸಾರ ಬಂಧನದಿಂದ ಬಿಡುಗಡೆ ಹೊಂದಿ ಮೋಕ್ಷವನ್ನು ಭಗವಂತನ ಪ್ರಸಾದದಿಂದ ಹೊಂದುವುದು. 9. ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳೇ ಪ್ರಮಾಣಗಳು (ಜ್ಞಾನಕ್ಕೆ ಸರಿಯಾದ ಮಾರ್ಗಗಳು), 10 ವೇದಗಳ ಜ್ಞಾನದಿಂದಲೇ ಶ್ರೀಹರಿಯನ್ನು ಸಂಪೂರ್ಣವಾಗಿ ತಿಳಿಯುವುದು ಸಾಧ್ಯ.

ಈ ಶ್ರೇಷ್ಟ ರತ್ನಗಳೆಂದು ಪ್ರಸಿದ್ಧಿಯಾದ ತತ್ವಗಳನ್ನು ಶ್ರೀವೇದವ್ಯಾಸ ದೇವರು ತಾವು ರಚಿಸಿರುವ ಬ್ರಹ್ಮಸೂತ್ರ ಭಾಷ್ಯಗಳಲ್ಲಿ ಬೋಧಿಸಿರುವರು. ಮತ್ತು ಶ್ರೀ ಮದಾನಂದತೀರ್ಥರು (ಶ್ರೀ ಮಧ್ವಾಚಾರ್ಯರು) ಅವುಗಳಲ್ಲಿ ಅಡಗಿರುವ ಮಹತ್ವವನ್ನು ತಿಳಿಯಪಡಿಸಿದ್ದಾರೆ. ಆದ್ದರಿಂದಲೇ ಅವರನ್ನು ಶ್ರೀವೇದವ್ಯಾಸದೇವರ ಶಿಷ್ಯರೆಂದೇ ಪರಿಗಣಿಸಲಾಗಿದೆ. ಬ್ರಹ್ಮಸೂತ್ರವೆಂದರೆ ಭಗವಂತನೇ ಭೂಮಿಯ ಮೇಲಿರುವ ಸಜ್ಜನರನ್ನು ಮೇಲಕ್ಕೆತ್ತಲು ಕೆಳಗಿಳಿಸಿದ ಸೂತ್ರ ಹಗ್ಗ. ಈ ಸೂತ್ರಾವಲಂಬನೆಯಿಂದ ಮಾತ್ರವೇ ನಾವು ಮೇಲಕ್ಕೇರಬಹುದು ಎಂಬುದನ್ನು ಮನದಟ್ಟು ಮಾಡಿಕೊಳ್ಳಬೇಕು. ಬ್ರಹ್ಮಸೂತ್ರ ನಿಜವಾದ ಅರ್ಥದಲ್ಲಿ ಅನಂತ ಶಾಖಾ ನಿರ್ಣಾಯಕವಾಗಿದೆ. ಇಂತಹ, ಮಹತ್ವಪೂರ್ಣವಾದ ಗ್ರಂಥವನ್ನು ಬರೆಯುವ ನಿಮಿತ್ತವಾಗಿಯೇ ಶ್ರೀಮನ್ನಾರಾಯಣ ಶ್ರೀವೇದವ್ಯಾಸರಾಗಿ ಅವತರಿಸಿದ್ದಾರೆ. ಅವರ ಶಿಷ್ಯರಾದ ಶ್ರೀಮದಾನಂದತೀರ್ಥರು ಸಜ್ಜನ (ಭಕ್ತ)ರನ್ನುದ್ಧಾರ ಮಾಡುವ ಕಾರಣ

ಕ್ಕಾಗಿಯೇ ಬ್ರಹ್ಮಸೂತ್ರಕ್ಕೆ ಅನುಗುಣವಾಗಿ ಭಾಷ್ಯವನ್ನು ರಚಿಸಿದ್ದಾರೆ. ಶ್ರೀ ಶಂಕರಾಚಾರ್ಯರು, ಶ್ರೀ ರಾಮಾನುಜಾಚಾರ್ಯರು ಭಾಷ್ಯವನ್ನು ಬರೆದಿರುವರು ಶ್ರೀಮದಾನಂದತೀರ್ಥ ಭಗವತ್ಪಾದರು ರಚಿಸಿರುವರು ಭಾಷ್ಯವು ಶ್ರೀವೇದವ್ಯಾಸದೇವರ ಬ್ರಹ್ಮಸೂತ್ರಕ್ಕೆ ಅನುಗುಣವಾಗಿರುವುದರಿಂದ ಅದು "**ಅನುವ್ಯಾಖ್ಯಾನ**" ವೆಂದು ಪ್ರಸಿದ್ಧಿಯಾಗಿದೆ.

ಅಂತಹ ಜಗತ್ಪ್ರಸಿದ್ಧಿಯನ್ನು ಪಡೆದ **ಅನುಭಾಷ್ಯದ** ಕರ್ತುಗಳಾದ ಶ್ರೀಮದಾನಂದತೀರ್ಥರ ಪರಂಪರೆಯಲ್ಲಿ (ಅವರ ಅನಂತರ) ಬಂದ ಶ್ರೀ **ಸತ್ಯವಿಜಯತೀರ್ಥರು 22ನೇಯವರು.** ಶ್ರೀ ಸತ್ಯವಿಜಯತೀರ್ಥರು ಪೂರ್ಣಾನುಗ್ರಹಪಾತ್ರನಾದ ಬಡ ಬ್ರಾಹ್ಮಣ ಕೃಷ್ಣಾಜಿ ಪಂತನನ್ನು ಮಂತ್ರಾಕ್ಷತೆ ಯನ್ನು ನೀಡಿ, ಅನುಗ್ರಹಿಸಿ, ಅದರ ಬಲದಿಂದ ಆರ್ಕಾಟ್ ನವಾಬನ ಮಂತ್ರಿಯನ್ನಾಗಿಸಿದ ಶ್ರೀ ಸತ್ಯಪೂರ್ಣತೀರ್ಥರವರ ಕುಮಾರರು, ಸಾಕ್ಷಾತ್ ಶಿಷ್ಯರು ಹಾಗು ಕುಚೇಷ್ಟೆ ಮಾಡಲು ಹೋಗಿ ದುರಾಗ್ರಹಕ್ಕೆ ತುತ್ತಾದ ಮುಸ್ಲೀಂ ರಾಜನನ್ನು ಅಂಧನಾಗಿಸಿ, ಪುನಃ ದಯೆತೋರಿ ದೃಷ್ಟಿಯನ್ನು ಮರುಕಳಿಸಿದ ಯತಿ ಪುಂಗವರಾದ ಶ್ರೀ ಸತ್ಯಪ್ರಿಯತೀರ್ಥರ ಆಶ್ರಮ ಗುರುಗಳು.

ಶ್ರೀ ಸತ್ಯವಿಜಯತೀರ್ಥರ ವೃಂದಾವನವು ಆರಣಿಗೆ ಅತಿ ಸಮೀಪವೆನ್ನು ವೆಂಬಂತೆ ಸತ್ಯವಿಜಯನಗರದಲ್ಲಿದೆ. ಬೆಂಗಳೂರಿನಿಂದ ಆರಣಿಗೆ ಹೋಗುವವರು ಹೊಸೂರು, ಕೃಷ್ಣಗಿರಿ ಮಾರ್ಗವಾಗಿ ತಲುಪಬಹುದು. ಆರಣಿಯಿಂದ ಸತ್ಯವಿಜಯನಗರ 10ಕಿ.ಮಿ. ಆಗುತ್ತದೆ. ಬೆಂಗಳೂರಿನಿಂದ ಸತ್ಯವಿಜಯನಗರಕ್ಕೆ ಸುಮಾರು 240 ಕಿ.ಮಿ. ದೂರವಾಗುತ್ತದೆ. ಮಹಾ ಸ್ವಾಮಿಗಳು ಕ್ರಿ.ಶ. 1739ರ ಸಿದ್ಧಾರ್ಥನಾಮ ಸಂವತ್ಸರದ ಚೈತ್ರ ಬಹುಳ ಏಕಾದಶಿಯಂದು ವೃಂದಾವನಸ್ಥರಾದರು. ಇವರ ಕಾಲ 1725 ರಿಂದ 1739, ಹದಿನಾಲ್ಕು ವರ್ಷಗಳಾಗುತ್ತವೆ. "ಸತ್ಕಥಾದ" ಪ್ರಕಾರ ಪಟ್ಟ 17.2.1648ನೇ ಪರಾಭವ ಸಂವತ್ಸರದಿಂದ 26.1.1659ನೇ ಪಿಂಗಳದವರೆಗೆ. ಶ್ರೀ ಕೆ.ಟಿ. ಪಾಂಡುರಂಗಿಯವರು ಬರೆದಿರುವ "**ಅಣುವಿದ್ಯಾಧೀಶ ವಿಜಯ**"ದ ಪ್ರಕಾರ ಪುಟ XVII ರಲ್ಲಿ ಇವರ ಕಾಲವನ್ನು ಹನ್ನೊಂದು ವರ್ಷಕಾಲವೆಂದು (ಕ್ರಿ.ಶ. 1728 ರಿಂದ 1739) ಗುರುತಿಸಲಾಗಿದೆ. ಇವರ ಗುರುಭಕ್ತಿ ಅಸದೃಶವಾದದ್ದು ಎಂದರೆ ಹೆಚ್ಚೇನಲ್ಲ. ಮಹಾಸ್ವಾಮಿಗಳು ವಿದ್ವತ್ ಸಂಪತ್ತಿಗೆ, ಗುರುಭಕ್ತಿಗೆ,

ಜ್ಞಾನ ವೈರಾಗ್ಯಕ್ಕೆ, ಅಪ್ರತಿಮವಾದ ವಾದಕೌಶಲ್ಯಕ್ಕೆ ಅವರಿಗೆ ಅವರೇ ಸಾಟಿಯಾಗಿದ್ದರು. ಪಾಂಡುರಂಗಿ ವಂಶಕ್ಕೆ ಸೇರಿದ ಇವರು ವಿದ್ವದ್ ಜನರಿಂದ ಮಾನ್ಯರಾಗಿದ್ದರು.

ಪಾಂಡುರಂಗಿ ಮನೆತನವು ಪ್ರಖರವಾದ ವಿದ್ವತ್ತಿಗೆ, ಪಾಂಡಿತ್ಯಕ್ಕೆ ಹೆಸರಾಗಿದೆ. ಮೊದಲಿಗೆ ಪಾಂಡುರಂಗಿ ವಂಶದವರು ಪಾಂಡುರಂಗನ ನೆಲೆವೀಡಾದ ಪಂಢರಾಪುರದಲ್ಲಿ ಬಹಳ ವರ್ಷ ನೆಲೆಸಿದ್ದುದರಿಂದ ಹಾಗು ಪಾಂಡುರಂಗನ ಪರಮಭಕ್ತರಾಗಿದ್ದುದರಿಂದ **ಪಾಂಡುರಂಗಿ ವಂಶದವರೆಂದು** ಪ್ರಖ್ಯಾತರಾದರು. ಪಾಂಡುರಂಗಿ ವಂಶಾವಳಿ (ಶ್ರೀ ಸತ್ಯವಿಜಯತೀರ್ಥರ ಆಶ್ರಮ ಪೂರ್ವ ಶ್ರೀ ಬಾಬಾಚಾರ್ಯರಿಗೆ ಸಂಬಂಧಿಸಿದಂತೆ) ಸಂಕ್ಷಿಪ್ತವಾಗಿ ಅಣುವಿದ್ಯಾಧೀಶವಿಜಯದಲ್ಲಿ ಶ್ರೀ ಕೆ.ಟಿ. ಪಾಂಡುರಂಗಿಯವರು ದಾಖಲಿಸಿದಂತೆ ಯಥಾವತ್ತು ನಮೂದಿಸಿದೆ;

ವಿಭಾಗ–5 (ಮನ್ನಾರ್ಗುಡಿ–ಕುಟ್ಟಾಲಮಠ)

ಆನಂದ ಭಟ್ಟರು (ಪುಣತಾಂಬೆ)

ಶ್ರೀ ಕೇಶವಾಚಾರ್ಯರು (ಗುರುರಾಜರು) ಶೂರ್ಪಾಲಿ

ಶ್ರೀ ಗಡ್ಡದ ಶ್ರೀನಿವಾಸಾಚಾರ್ಯರು (ಮನ್ನಾರ್ಗುಡಿ)

ಶ್ರೀ ನರಸಿಂಹಾಚಾರ್ಯರು

ಶ್ರೀ ಗೋಪಲಾಚಾರ್ಯರು (ಮನ್ನಾರ್ಗುಡಿ)

ಶ್ರೀ ವಾಸುದೇವಾಚಾರ್ಯರು (ಮನ್ನಾರ್ಗುಡಿ)

ಶ್ರೀ ಬಿಂಧುಮಾಧವಾಚಾರ್ಯರು (ಮನ್ನಾರ್ಗುಡಿ)

ಶ್ರೀ ಕೇಶವಾಚಾರ್ಯರು (ಮನ್ನಾರ್ಗುಡಿ)

ಶ್ರೀ ವ್ಯಾಸಾಚಾರ್ಯರು (ಕುಂಭಕೋಣ)

ಶ್ರೀ ರಾಮಚಂದ್ರಾಚಾರ್ಯರು (ಮನ್ನಾರ್ಗುಡಿ)

ಶ್ರೀ ವ್ಯಾಸಭೀಮನ್ (ಲಕ್ನೊ) (ಪಿ.ವಿ. ಭೀಮನ್) ವಿದ್ಯಾಮಾನ್ಯರು

ಶ್ರೀ ರಾಘವೇಂದ್ರ (ಮದರಾಸ್) ವಿದ್ಯಾಮಾನ್ಯರು

ಪಾಂಡುರಂಗಿಮನೆತನದಲ್ಲಿ ಜನಿಸಿದ ಶ್ರೀ ನರಸಿಂಹಾಚಾರ್ಯರು ವಿಶ್ವವಿಖ್ಯಾತವಾದ ಶ್ರೇಷ್ಠತಮವಾದ ಶ್ರೀಮದುತ್ತರಾದಿ ಮಠದ ಪೀಠವನ್ನು ಅಲಂಕರಿಸಿದ **ಯತಿ ಕುಲಾಂಭೋಧಿ ಚಂದ್ರರು, "ವಾಕ್ಯಾರ್ಥ ಚಂದ್ರಿಕಾ"** ಗ್ರಂಥಕಾರರು ಆದ ಶ್ರೀ **ವಿದ್ಯಾಧೀಶರು.** ಮಹಾನುಭಾವರಾದ ಶ್ರೀ ವಿದ್ಯಾಧೀಶರ ಆಶ್ರಮ ಪೂರ್ವದ ಜನಕರೇ ಶ್ರೀ ಆನಂದತೀರ್ಥಭಟ್ಟಾರಕರು (ಭಟ್ಟರು). ಶ್ರೀಗಳವರ ಅಣ್ಣಂದಿರೇ (ಪೂರ್ವಾಶ್ರಮ) ಶ್ರೀ ಶ್ರೀನಿವಾಸಾಚಾರ್ಯರು ಇವರು ತತ್ವಪ್ರಕಾಶಕ್ಕೆ ಟಿಪ್ಪಣಿಯನ್ನು ಬರೆದಿರುವರು. ಒಂದು ಐತಿಹ್ಯದ ಪ್ರಕಾರ ಶ್ರೀ ಪಾಂಡುರಂಗಿ ಆನಂದ ಭಟ್ಟಾರಕರು ತಮ್ಮ ಕುಲದೇವತೆಯಾದ ಕೊಲ್ಹಾಪುರ ಲಕ್ಷ್ಮೀಯನ್ನು ಸತತವಾಗಿ 12 ದಿನಗಳು ಭಕ್ತಿಪುರಸ್ಸರವಾಗಿ ಪೂಜೆಮಾಡಲು 12ನೇ ದಿನದಂದು ಅವರ ಸ್ವಪ್ನದಲ್ಲಿ ವಿಷ್ಣುಪತ್ನಿಯಾದ **ಜಗಜ್ಜನನಿ, ಸಿರಿದೇವಿ, ಮಹಾಲಕ್ಷ್ಮಿಯು** ಕಾಣಿಸಿಕೊಂಡು ತಾನು ಸರ್ಪ ರೂಪದಲ್ಲಿ ಮರುದಿನ ಬೆಳಿಗ್ಗೆ ದರ್ಶನ ನೀಡುವುದಾಗಿ ಹೇಳಿದಳಂತೆ. ಅಂತಯೇ ಮಾರನೇ ದಿನ ಸರ್ಪರೂಪದಲ್ಲಿ ದರುಶನವಿತ್ತಾಗ ಆನಂದ ಭಟ್ಟಾರಕರು ಆನಂದಾತಿಶಯದಿಂದ ನೋಡುತ್ತಿದ್ದು, ತನ್ಮಯತೆಯಿಂದ ಎಚ್ಚೆತ್ತು ಅದರ ಪುಚ್ಛಭಾಗವನ್ನು ಸ್ಪರ್ಶಿಸಿದರಂತೆ. ಅಂದಿನಿಂದ, ಅವರಿಗೆ ಸಾಕ್ಷಾತ್ ಸಿರಿದೇವಿಯ ಕೃಪಾಕಟಾಕ್ಷ ಉಂಟಾಯಿತಂತೆ. ಹಾಗೂ ಸಂಪತ್ತು, ಜ್ಞಾನ, ಭಕ್ತಿಯ ಹೊಳೆ ಹರಿಯಲು ಪ್ರಾರಂಭವಾಯಿತಂತೆ. ಶ್ರೀ ಆನಂದ ಭಟ್ಟಾರಕರು ಹಾಗೂ ತಿರುಕೋಯಿಲೂರಾಧೀಶರಾದ ಶ್ರೀ ರಘೋತ್ತಮ ತೀರ್ಥರ ಶಿಷ್ಯರಾದ **"ತರಂಗಿಣಿ ರಾಮಾಚಾರ್ಯರು"** ಕಾಶಿಯ ಮಹಾ ಪಂಡಿತರಾದ ಶ್ರೀಮಧುಸೂಧನ ಸರಸ್ವತಿಗಳಲ್ಲಿ ಇಬ್ಬರು ಶಿಷ್ಯರಾಗಿ ಸೇರಿದರಂತೆ. ಇಬ್ಬರು ಅವರಲ್ಲಿ **"ಅದ್ವೈತ ಸಿದ್ಧಿ"** ಗ್ರಂಥವನ್ನು ಓದಿದರಂತೆ. ಈ ಅದ್ವೈತ ಸಿದ್ಧಿ" ಗ್ರಂಥಕ್ಕೆ ಶ್ರೀ ವ್ಯಾಸರಾಜರು ಬರೆದಿರುವ **"ನ್ಯಾಯಾಮೃತವು"** ಖಂಡನಾಗ್ರಂಥವಾಗಿದೆ. ಶ್ರೀ ಮಧುಸೂಧನ ಸರಸ್ವತಿ ಯವರು ಇವರುಗಳ ವಿಷಯ ತಿಳಿದು, ತಮಗೆ ಗುರಕಾಣಿಕೆಯಾಗಿ ಅವರು ಗಳು ಬರೆದಿರುವುದನ್ನು ಗಂಗೆಯಲ್ಲಿ ಹಾಕಬೇಕೆಂದರಂತೆ. ಆದರೆ ಕಾಲ ಮಿಂಚಿ ಹೋಗಿತ್ತು. ತರಂಗಿಣಿ ರಾಮಾಚಾರ್ಯರು ಹಾಗೂ ಆನಂದ ಭಟ್ಟಾರಕರು ಅವರುಗಳು ಅಭ್ಯಾಸ ಮಾಡುವ ಕಾಲದಲ್ಲೇ ಎರಡು

ಪ್ರತಿಯನ್ನು ಮಾಡಿಟ್ಟುಕೊಂಡು ಒಂದನ್ನು ಮಧುಸೂಧನ ಸರಸ್ವತಿಯ ಆಣತಿಯಂತೆ ಗಂಗೆಯಲ್ಲಿ ಸಮರ್ಪಿಸಿದರು. ಮತ್ತೊಂದು ಪ್ರತಿಯನ್ನು ಶ್ರೀ ಚಂದ್ರಿಕಾಚಾರ್ಯರಿಗೆ ಕಳುಹಿಸಿಬಿಟ್ಟಿದ್ದರಂತೆ. ಶ್ರೀ ಮಧೂಸೂಧನ ಸರಸ್ವತಿಯವರು ಅಂದುಕೊಂಡಂತೆ ಕಾರ್ಯಸಫಲವಾಗಲಿಲ್ಲ. ಶ್ರೀ ತರಂಗಿಣಿ ರಾಮಾಚಾರ್ಯರು ಹಾಗೂ ಶ್ರೀ ಆನಂದ ಭಟ್ಟಾರಕರುಗಳು ಸಹ "ತರಂಗಿಣಿ" ಹಾಗೂ ಕಂಟಕೋದ್ಧಾರವೆಂಬ ಖಂಡನಾಗ್ರಂಥವನ್ನು ರಚಿಸಿದ್ದಾರೆ.

ಪರ್ಯಾಯದ ಸಮಯ ಒಮ್ಮೆ ಶ್ರೀ ವಾದಿರಾಜಸ್ವಾಮಿಗಳು ಅದ್ವೈತಿ ಪಂಡಿತನೊಬ್ಬನ ಜೊತೆ ವಾದ ಮಾಡುತಲಿದ್ದರು. ವಾದ ಮುಗಿಯುವ ಸೂಚನೆಗೋಚರಿಸಲಿಲ್ಲ. ಪರ್ಯಾಯವು, ಸನ್ನಿಹಿತವಾಗುತ್ತಲಿದೆ. ಇನ್ನು ಕೇವಲ ಕೆಲವು ದಿನಗಳು ಉಳಿದಿವೆ. ಹೋಗಲೇಬೇಕಾದ ಪರಿಸ್ಥಿತಿ ಉಂಟಾಯಿತು. ಶ್ರೀ ವಾದಿರಾಜರು ಮಧ್ಯದಲ್ಲಿ ಗತ್ಯಂತರವಿಲ್ಲದೇ ವಾದದಿಂದ ವಿರಮಿಸಬೇಕಾಯಿತು. ಶ್ರೀಗಳವರು ಅಲ್ಲಿಂದ ರಜತಪುರಿಗೆ ಹೊರಟರು. ಆಗ ಆ ಅದ್ವೈತಿ ಭಟ್ಟಾರಕರು ಪಂಡಿತನೊಡನೆ ವಾದಮಾಡಿ ಅವನನ್ನು ನಿರುತ್ತರಗೊಳಿಸಿ, ವಾಕ್ಯಾರ್ಥದಲ್ಲಿ ಜಯಸಾಧಿಸಿ ಜಯಪತ್ರವನ್ನು ಅವನಿಂದ ಪಡೆದು, ಬಿರುದು, ಬಾವಲಿಗಳ ಸಹಿತ ರಜತಪುರಿಗೆ ಬಂದು ಶ್ರೀ ವಾದಿರಾಜರ ಚರಣಾರವಿಂದಗಳಲ್ಲಿ ಸಮರ್ಪಿಸಿ ಸಾಷ್ಟಾಂಗ ನಮಸ್ಕಾರ ಹಾಕಿದರಂತೆ. ಸಂತುಷ್ಟರಾದ ರಾಜರು ಭಟ್ಟಾರಕರಿಗೆ ಸುಪುತ್ರಾನುಗ್ರಹವಾಗಲೆಂದು ಆಶೀರ್ವದಿಸಿದರು. ಈ ಸುಪುತ್ರರೇ ಪಾಂಡುರಂಗಿ ವಂಶಜಾತರಾದ, ವಿಖ್ಯಾತ ಶ್ರೀ ವಿದ್ಯಾಧೀಶ ಶ್ರೀ ಪಾದಂಗಳವರು. ಇವರು **ವಾಕ್ಯಾರ್ಥ ಚಂದ್ರಿಕಾಚಾರ್ಯರೆಂದು** ಪ್ರಸಿದ್ಧಿಯಾಗಿದ್ದಾರೆ. ಆಶ್ರಮ ಪೂರ್ವನಾಮಧೇಯ ಶ್ರೀ ನರಸಿಂಹಾಚಾರ್ಯರು. ಶ್ರೀ ಆನಂದ ಭಟ್ಟಾರಕರ ಮತ್ತೊಬ್ಬ ಸುಪುತ್ರ ಶ್ರೀ ಕೇಶವಾಚಾರ್ಯರು. ಮಹಾಸ್ವಾಮಿಗಳು ತಮ್ಮ ಆಶ್ರಮಪೂರ್ವ ಜನಕರಾದ ಶ್ರೀ ಆನಂದಭಟ್ಟಾರಕರ ಆಶಯದಂತೆ ಶ್ರೀ ಕೇಶವಾಚಾರ್ಯರಿಗೆ ವಿದ್ಯಾಭ್ಯಾಸವನ್ನು ಮಾಡಿಸಿ ಘನವೇತ್ತ ಪಂಡಿತರನ್ನಾಗಿ ಮಾಡಿದರಂತೆ. ಶ್ರೀ ಕೇಶವಾಚಾರ್ಯರು ಶ್ರೀ ಗುರುರಾಜರೆಂದು ಪ್ರಸಿದ್ಧಿಯಾಗಿದ್ದಾರೆ.

ಶ್ರೀ ಕೇಶವಾಚಾರ್ಯರ ಪೀಳಿಗೆಯಲ್ಲಿ ಬಂದ ಶ್ರೀ **ಬಾಬಾಚಾರ್ಯರು,** ಶ್ರೀ ಗಡ್ಡದ ಶ್ರೀನಿವಾಸಾಚಾರ್ಯರ ಮಕ್ಕಳು. ಶ್ರೀ ಗಡ್ಡದ ಶ್ರೀನಿವಾಸಾಚಾರ್ಯರು ಶ್ರೀ ಕೇಶವಾಚಾರ್ಯರ ಮಕ್ಕಳು. ಶ್ರೀ ಬಾಬಾಚಾರ್ಯರು ಮುಂದೆ ದ್ವೈತ ಸಾಮ್ರಾಜ್ಯ ಮಕುಟಪ್ರಾಯರಾಗಿ ಶ್ರೀ ಆನಂದತೀರ್ಥರ ಮೂಲಮಠವೆಂದೇ ಖ್ಯಾತಿ ಯಾಗಿರುವ ಶ್ರೀ ಮದುತ್ತರಾದಿಮಠದ ಪೀಠವನ್ನಲಂಕರಿಸಿದ **ಯತಿ ಸಾರ್ವಭೌಮ ಶ್ರೀ ಸತ್ಯವಿಜಯತೀರ್ಥರು.** ಶ್ರೀ ಕೇಶವಾಚಾರ್ಯರು, ವಾಕ್ಯಾರ್ಥ ಚಂದ್ರಿಕಾಚಾರ್ಯರೆಂದೆ ಪ್ರಸಿದ್ಧಿಯಾಗಿರುವ ಶ್ರೀ ವಿದ್ಯಾಧೀಶರ "ವಾಕ್ಯಾರ್ಥ ಗ್ರಂಥದ" ಶೇಷಭಾಗಕ್ಕೆ ಗ್ರಂಥವನ್ನು ರಚಿಸಿ "ಶೇಷವಾಕ್ಯಾರ್ಥ ಚಂದ್ರಿಕಾ" ರಚಯಿತರೆಂದು ಹೆಸರಾಗಿದ್ದಾರೆ. ಟಿಪ್ಪಣಿ ದ್ವಯಗ್ರಂಥಗಳು ಬಹಳಷ್ಟು ದೊಡ್ಡದಾಗಿದೆ ಅಲ್ಲದೇ ಪ್ರೌಢವಾಗಿವೆ. ಶ್ರೀ ಕೇಶವಾಚಾರ್ಯರ ಮಕ್ಕಳಾದ ಶ್ರೀ ರತ್ನಮಾಲಾ ನರಸಿಂಹಾಚಾರ್ಯರು "ವಾಕ್ಯಾರ್ಥ ರತ್ನಮಾಲಾ" ಎಂಬ ಉಪ ಟಿಪ್ಪಣಿಯನ್ನು ಬರೆದಿದ್ದಾರೆ. ರತ್ನಮಾಲಾ ಎಂಬುದು ಶ್ರೀ ನರಸಿಂಹಾ ಚಾರ್ಯರು ವಾಕ್ಯಾರ್ಥ ರತ್ನಮಾಲಾ ಗ್ರಂಥವನ್ನು ಬರೆದಿದ್ದರಿಂದ ಬಂದಿರ ಬಹುದು. ಇದು ಸುಮಾರು ಎರಡು ಸಾವಿರ ಪತ್ರಗಳು ಉಳ್ಳ ವಿಸ್ತಾರವಾದ ಗ್ರಂಥವಾಗಿದೆ. ಗ್ರಂಥದ ಆದಿಯಲ್ಲಿ ಶ್ರೀ ಆನಂದಭಟ್ಟಾರಕರನ್ನು ಅವರ ಜ್ಯೇಷ್ಠ ಪುತ್ರ ಶ್ರೀನಿವಾಸಾಚಾರ್ಯರನ್ನು ಹಾಗು ತಮ್ಮ ತಂದೆ ಶ್ರೀ ಕೇಶವಾಚಾರ್ಯರನ್ನು ವಂದಿಸಿದ್ದಾರೆ. ಜ್ಯೇಷ್ಠ ಭ್ರಾತೃ ಗಡ್ಡದ ಶ್ರೀನಿವಾಸಾಚಾರ್ಯರನ್ನೂ ವಂದಿಸಿದ್ದಾರೆ.

ಶ್ರೀ ಕೇಶವಾಚಾರ್ಯರ ಜ್ಯೇಷ್ಠಪುತ್ರರು ಶ್ರೀ ಗಡ್ಡದ ಶ್ರೀನಿವಾಸಾಚಾರ್ಯರು. ಇವರ ಕುವರರೇ ಆಶ್ರಮಪೂರ್ವದ **ಶ್ರೀ ಸತ್ಯವಿಜಯತೀರ್ಥ ಶ್ರೀ ಪಾದಂಗಳ ವರು.** ಒಂದು ಐತಿಹ್ಯದ ಪ್ರಕಾರ ಶ್ರೀ ಶ್ರೀನಿವಾಸಾಚಾರ್ಯರು ಗಡ್ಡವನ್ನು ಬಿಟ್ಟು ಕೊಂಡಿದ್ದರಿಂದ ಇವರು ಗಡ್ಡದ ಶ್ರೀನಿವಾಸಾಚಾರ್ಯರೆಂದು ಕರೆಯಲ್ಪಡುತ್ತಿದ್ದರಂತೆ. **"ಐತಿಹ್ಯ"**–ಯಾವುದೇ ಒಬ್ಬ ನಿರ್ದಿಷ್ಟ ವಕ್ತೃ ಇಲ್ಲದೇ ಪರಂಪರೆಯಾಗಿ ಬಂದ ಜ್ಞಾನಕ್ಕೆ ಐತಿಹ್ಯ ಎನ್ನುತ್ತಾರೆ. ಉದಾಹರಣೆಗೆ–ಈ ಮಠದಲ್ಲಿ ಪಿಶಾಚಿ ಇದೆ ಎನ್ನುವ ವಾರ್ತೆಗೆ ಯಾವ ನಿರ್ದಿಷ್ಟ ವಕ್ತೃವು ಇಲ್ಲ. ಆದರೆ ಬಾಯಿಂದ ಬಾಯಿಗೆ ಪರಂಪರಾಗತವಾಗಿ ಹರಡಿದ ಮಾತಾದು ದರಿಂದ ಇದು ಐತಿಹ್ಯ" (ಪುಟ 123–ಪ್ರಮಾಣ ಚಂದ್ರಿಕಾ). ಗಡ್ಡದ ಶ್ರೀನಿವಾಸಾ ಚಾರ್ಯರು ಗಡ್ಡಧಾರಣೆ ಮಾಡಿ ಸಂಚಾರ ಮಾಡುವಾಗ ಮುಸಲ್ಮಾನರಂತೆ

ಕಾಣುತ್ತಿದ್ದರಂತೆ. ಒಮ್ಮೆ ಸಂಚಾರ ಕ್ರಮದಲ್ಲಿ ಶ್ರೀರಂಗಕ್ಕೆ ಬಂದಾಗ ಗೃಹಸ್ಥನೊಬ್ಬನ ಮನೆಯಲ್ಲಿ ಆ ಮನೆಯ ಗೃಹಿಣಿಯು ಇವರ ವೇಷ ಭೂಷಣಗಳನ್ನು ನೋಡಿ ಅವರಿಂದ ತೀರ್ಥತೆಗೆದುಕೊಳ್ಳಲು ಹಿಂಜರಿದಳಂತೆ. ಆಗ ಅವಳ ಕಣ್ಣಿಗೆ ಆಚಾರ್ಯರು ಭಯಂಕರವಾದ ಸರ್ಪದೋಪಾದಿಯಲ್ಲಿ ಕಾಣಿಸಿಕೊಂಡರಂತೆ. ತಕ್ಷಣವೇ ತನ್ನ ತಪ್ಪನ್ನು ಅರಿತು ಕ್ಷಮೆಯನ್ನು ಬೇಡಿ ತೀರ್ಥವನ್ನು ಪಡೆದಳಂತೆ. ದೊಡ್ಡವರ ರೀತಿಯೇ ವಿಭಿನ್ನ.

ಯೋ ವೈಶಾಸ್ತ್ರ ಚತುಷ್ಟಯೇಽತಿನಿಪುಣಃ ದೂರೀ ಕೃತಾಜ್ಞಾನಕಃ
ದುರ್ವಾದೀಂದ್ರ ವಿದಾರಣೇಽತಿ ಚತುರಃ ದಾನೇತು ಕರ್ಣೋಽಪಮಃ
ಗುರ್ವಾನುಗ್ರಹವಾರಿಧಿಃ ಮಯಿಪರಂ ಸ್ನೇಹಂ ದಯಾಂಚ ಕರೋತ್
ಜ್ಯೇಷ್ಠ ಭ್ರಾತರ ಮಾಶ್ರಯೋ ಸುಮತಯೇ ಶ್ರೀ ಶ್ರೀನಿವಾಸಂ ಗುರುಂ ॥

ನಾಲ್ಕು ಶಾಸ್ತ್ರಗಳಲ್ಲಿ ಅತಿನಿಪುಣರು, ಅಜ್ಞಾನವನ್ನು ದೂರಮಾಡುವವರು, ದುರ್ವಾದಿಗಳನ್ನು ಖಂಡಿಸಿ ಸೋಲಿಸುವುದರಲ್ಲಿ ಅತಿಚತುರರು, ದಾನವನ್ನಿಡುವುದರಲ್ಲಿ ಕರ್ಣನಿಗೆ ಸಮಾನರು, ಅನುಗ್ರಹವನ್ನು ನೀಡುವುದರಲ್ಲಿ ವಾರಿಧಿಯಂತಿದ್ದವರು, ನನ್ನ ಮೇಲೆ ಪರಮ ಸ್ನೇಹವನ್ನು, ಪ್ರೀತಿಯನ್ನು, ದಯೆಯನ್ನು ಮಾಡುತ್ತಿದ್ದ ನನ್ನ ಜ್ಯೇಷ್ಠ ಭ್ರಾತರಾದ ಶ್ರೀ ಶ್ರೀನಿವಾಸಾಚಾರ್ಯರನ್ನು ಆಶ್ರಯಿಸುತ್ತೇನೆ. (ರತ್ನಮಾಲಾಕರ್ತರು) ಶ್ರೀಮನ್ನ್ಯಾಯ ಸುಧಾ ಮತ್ತು ವಾಕ್ಯಾರ್ಥ ಚಂದ್ರಿಕಾದ ಪಾಠ ಭೇದಗಳನ್ನು ವಿಮರ್ಶಿಸಿ ಶುದ್ಧವಾದ ಪಾಠಗಳನ್ನು ನಿರ್ಣಯಿಸಿರುತ್ತಾರೆ. ರತ್ನಮಾಲಾ ನರಸಿಂಹಾಚಾರ್ಯರ ಎಂಟನೇ ತಲೆಮಾರಿನಲ್ಲಿ ಬಂದ ಶ್ರೀ ಮಠದ ದಿವಾನರಾಗಿದ್ದ ಶ್ರೀ ಜಯಾಚಾರ್ಯರೇ ಮುಂದೆ, ಶ್ರೀ ಮದುತ್ತರಾದಿಮಠದ ಪೀಠವನ್ನಲಂಕರಿಸಿದ ಶ್ರೀ ಸತ್ಯಪ್ರಜ್ಞತೀರ್ಥರು. ಇವರ ವೃಂದಾವನವು ಆತಕೂರಿನಲ್ಲಿದೆ. (ಇದೇ ಲೇಖಕರ "ಚತುರ್ವೃಂದಾವನ ಆತಕೂರನ್ನು" ನೋಡಿ)

ರಾಮದಾಸ ಪಂಥವನಾದ ಮೇರುಸ್ವಾಮಿ, ತಿರುವಣ್ಣಾಮಲೆಯಲ್ಲಿ ಪ್ರಥಮವಾಗಿ ತಮ್ಮ ಮಠವನ್ನು ಕಟ್ಟಿಸಿಕೊಂಡು, ನಂತರ ಆ ಸ್ವಾಮಿಯು, ವಿದ್ವಾಂಸರನ್ನು, ಪಂಡಿತ ಶ್ರೇಷ್ಠರನ್ನು ಉತ್ತರ ಕರ್ನಾಟಕ ಹಾಗು ಮಹಾರಾಷ್ಟ್ರ ಪ್ರದೇಶಗಳಿಂದ ಬರಮಾಡಿಕೊಂಡನು. ಅಂಥಹ ವಿದ್ವತ್ ಶ್ರೇಷ್ಠರಲ್ಲಿ ಗಡ್ಡದ

ಶ್ರೀ ಶ್ರೀನಿವಾಸಾಚಾರ್ಯರು ಮೊದಲಿಗರು. ಗಡ್ಡದ ಶ್ರೀನಿವಾಸಾಚಾರ್ಯರು ತಮ್ಮ ಮಕ್ಕಳಾದ ಶ್ರೀ ಬಾಬಾಚಾರ್ಯರು ಹಾಗೂ ಸಂಸಾರ ಸಮೇತ ಮೇರುಸ್ವಾಮಿ ಕೊಟ್ಟಿದ್ದ ಮನೆ ಹಾಗೂ ಜಮೀನಿನಲ್ಲಿ ಪಾಠ-ಪ್ರವಚನ ನಿರತರಾಗಿ, ಮನೆಯನ್ನೆ ಪಾಠಶಾಲೆಯನ್ನಾಗಿ ಮಾಡಿ ವಾಸಿಸುತ್ತಿದ್ದರು. ಇವರ ಮಕ್ಕಳಾದ ಶ್ರೀ ಬಾಬಾಚಾರ್ಯರು, ಅಗ್ನಿ ಹೋತ್ರಿಗಳಾಗಿದ್ದು ಅವರ ತಂದೆಯ ಅಡಿಜಾಡಿನಲ್ಲಿ ನಡೆಯುತ್ತಿದ್ದರು.

ಒಮ್ಮೆ ಶ್ರೀ ಮದುತ್ತರಾದಿಮಠದ ಯತಿಗಳು, ಮಹಾತಪಸ್ವಿಗಳು, ಜ್ಞಾನ ವೈರಾಗ್ಯ ಶಿಖಾಮಣಿಗಳು, ಪರವಾದಿಗಳನ್ನು ಪಲಾಯನ ಮಾಡಿಸಿದವ ರಂಥಹವರು, ಪರಮ ಸಾತ್ವಿಕರು, ಕರುಣಾಸಮುದ್ರರು ಆದ ಶ್ರೀ **ಸತ್ಯಪೂರ್ಣರು** ಸಂಚಾರತ್ವೇನ ಇಲ್ಲಿಗೆ ಬಂದರು. ಆಗ ಶ್ರೀ ಬಾಬಾಚಾರ್ಯರು ಹರಿದ್ರಾನದಿ ತೀರದಲ್ಲಿ ಬೃಹತ್ ಆದ ಯಾಗವನ್ನು ಕೈಗೊಂಡಿದ್ದರು. ಯಾಗವು ಬಹು ವಿಜೃಂಭಣೆಯಿಂದ ವೈಭವೋಪೇತವಾಗಿ ನಡೆಯುತ್ತಿತ್ತು. ಶ್ರೀ ಸತ್ಯಪೂರ್ಣರಿಗೆ ಬಾಬಾಚಾರ್ಯರ ಗುರು ಭಕ್ತಿಯನ್ನು ನೆರೆದಿದ್ದ ಭಕ್ತರಿಗೆ ವ್ಯಕ್ತಗೊಳಿಸಬೇಕೆಂದು ಶ್ರೀ ಮೂಲರಾಮನು ಅವರ ಮನಸ್ಸಿಗೆ ಮನವರಿಕೆ ಮಾಡಿಸಿದನು. ಶ್ರೀ ಸತ್ಯಪೂರ್ಣರು ಶ್ರೀಮೂಲರಾಮರ ಆದೇಶವನ್ನು ಪರಿಪಾಲಿಸಿ, ತಮ್ಮ ಶಿಷ್ಯನೊಬ್ಬನನ್ನು ಶ್ರೀ ಬಾಬಾಚಾರ್ಯರಲ್ಲಿ ಕಳುಹಿಸಿ, ತಕ್ಷಣವೇ ದರುಶನಕ್ಕೆ ಬರವಂತೆ ಹೇಳಿದರು. ಆ ಶಿಷ್ಯನು ಮಹಾಸ್ವಾಮಿಗಳ ಅಪ್ಪಣೆಯನ್ನು ಬಾಬಾಚಾರ್ಯರಲ್ಲಿ ಹೇಳಲು ಗುರುಭಕ್ತಿದುರಂಧರರಾದ ಆಚಾರ್ಯರು ನಿಮಿಷಾರ್ಧವು ಯೋಚಿಸದೆ ಗುರುಗಳ ಆಜ್ಞಾನುಸಾರ ಯಜ್ಞವನ್ನು ನಿಲ್ಲಿಸಿ ಯಾಗದ್ರವ್ಯಗಳನ್ನು ಹರಿದ್ರಾನದಿಯಲ್ಲಿ ಹಾಕಿ ಗುರುಗಳೆಡೆಗೆ ಬಂದರು. ಗುರುಭಕ್ತಿಗೆ ಇದಕ್ಕಿಂತ ನಿದರ್ಶನಬೇಕೆ. ವೈರಾಗ್ಯ ಶಿಖಾಮಣಿಗಳಾದ ಶ್ರೀ ಸತ್ಯಪೂರ್ಣರು ತಮ್ಮ ವ್ಯಕ್ತಿತ್ವವನ್ನು ಹೆಚ್ಚಿಸಕೊಳ್ಳಬೇಕೆಂದು ಹೀಗೆ ಮಾಡಲಿಲ್ಲ. ಹಿಂದೆ, ಪಿತೃವಾಕ್ಯಾಪರಿಪಾಲಕನು, ಗುರುಗಳ ಆಜ್ಞಾಧಾರಕನು, ಜಗದ್ವಂದ್ಯ ಮರ್ಯಾದಾ ಪುರುಷೋತ್ತಮನು ಆದ ಶ್ರೀರಾಮಚಂದ್ರ ಪ್ರಭುವನ್ನು ಪೂಜಿಸುವ ಆಚಾರ್ಯರಿಗೆ ಸೌಭಾಗ್ಯವಿದೆಯೋ ಇಲ್ಲವೊ ಎಂದು ತಿಳಿಯಲು ಅವರನ್ನು ಪರೀಕ್ಷೆಗೊಡ್ಡಿದರು, ಎಂದರೆ ಅತಿಶಯೋಕ್ತಿಯೇನಲ್ಲ.

ಇದಕ್ಕೆ ಪೂರಕವಾಗಿ ಇಂಥಹದೇ ಒಂದು ನಿದರ್ಶನವನ್ನು ಶ್ರೀಗಳವರು ಮಾಡಿದರು. ಒಮ್ಮೆ ಶ್ರೀ ಸತ್ಯಪೂರ್ಣರು ಸಂಚಾರತ್ವೇನ ತಿರುಪತಿಗೆ ಭೂ-ವೈಕುಂಠನಾಥನಾದ ಕಲಿಯುಗ ದೈವನಾದ, ಸಪ್ತಗಿರೀಶ ಶ್ರೀ ವೆಂಕಟರಮಣನನ್ನು ದರ್ಶಿಸಲು ಹೋದರು. ಬೆಟ್ಟವನ್ನು ಏರುವ ಮುನ್ನ ಶ್ರೀ ಶ್ರೀನಿವಾಸನನ್ನು ಪ್ರಾರ್ಥಿಸಿ ಮಹಾಸ್ವಾಮಿಗಳಿಗೆ ಮುಂದೆ ಶ್ರೀಮಠದ ಚತುರ್ಯುಗ ಮೂರ್ತಿಗಳಾದ ಶ್ರೀಮೂಲರಾಮ ಸೀತಾದೇವಿಯರನ್ನು ಪೂಜಿಸುವ ಯೋಗ್ಯತೆ ತಮ್ಮ ಶಿಷ್ಯರಲ್ಲಿ ಯಾರಿಗಿರುವುದೆಂದು ಮನಸ್ಸಿಗೆ ಬಂತು. ಹೀಗೆ ಮನಸ್ಸನ್ನು ಆ ವೆಂಕಟರಮಣನು ಕೊಡಲು, ತತ್‌ಕ್ಷಣವೇ, ಮಹಾಸ್ವಾಮಿಗಳು ಆ ಶ್ರೀನಿವಾಸನು ತಮ್ಮಲ್ಲಿ ನಿಂತು ಶಿಷ್ಯರ ನಿಯಮ, ನಿಷ್ಠೆ, ಆಚಾರ, ವಿಚಾರಗಳನ್ನು ಪರೀಕ್ಷಿಸಿ ಅವರಲ್ಲಿ ಸೂಕ್ತರಾದ ಒಬ್ಬರನ್ನು ತಮ್ಮ ತರುವಾಯ ಪೀಠವನ್ನಲಂಕರಿಸುವವರನ್ನು ನಿರ್ಧರಿಸುವ ನಿರ್ಧಾರ ಮಾಡಿರುವನೆಂದು ಬಗೆದರು.

ಶ್ರೀ ಮಹಾಸ್ವಾಮಿಗಳು ಶಿಷ್ಯರನ್ನು ಹಾಗು ಮಠದ ವಿದ್ವಾಂಸರನ್ನು, ಪಂಡಿತರನ್ನು ಕರೆದು ನಿಮ್ಮಲ್ಲಿ ಯಾರು ನಿಷೇಕದ ಮುನ್ನ ಬ್ರಹ್ಮಚರ್ಯವನ್ನು ಕಟ್ಟುನಿಟ್ಟಾಗಿ, ಪಾಲಿಸುತ್ತಿದ್ದು ತದನಂತರ ದಿನತ್ರಯವನ್ನು ಅಷ್ಟೇ ಕಟ್ಟುನಿಟ್ಟಾಗಿ ಪಾಲಿಸುತ್ತಿರುವರೋ, (ದಶಮಿ, ಏಕಾದಶಿ, ದ್ವಾದಶಿ) ಅಂತಹವರು ತಮ್ಮ ಕೈಯನ್ನು ಹಿಡಿದು ಬೆಟ್ಟವನ್ನು ಹತ್ತಬಹುದೆಂದು ತಮ್ಮ ಹಸ್ತವನ್ನು ಚಾಚಿದರು. ಆಗ ಅಲ್ಲಿದ್ದ ಪಂಡಿತರು ಹಾಗೂ ವಿದ್ವಾಂಸರು ಯಾರೂ ಮುಂದೆ ಬರಲಿಲ್ಲ. ಶಿಷ್ಯರಲ್ಲಿ ಸಹ ಯಾರೂ ಮುಂದೆ ಬರಲಿಲ್ಲ. ಸ್ವಾಮಿಗಳು ಒಂದು ಕ್ಷಣ ಅವಕ್ಕಾದರು. ಅಷ್ಟರಲ್ಲಿ, ಅಷ್ಟಾಗಿ ಎಂದೂ ತಮ್ಮನ್ನು ತಾವು ಗುರುತಿಸಿಕೊಳ್ಳದಿದ್ದ ಶ್ರೀ ಗಾರ್ಲಪಾಡ ರಾಮಾಚಾರ್ಯರು ಧೈರ್ಯವಾಗಿ ಮುಂದೆ ಬಂದು ಶ್ರೀಗಳವರ ಪಾದಕ್ಕೆ ನಮಸ್ಕರಿಸಿದರು. ನಂತರ ಶ್ರೀಗಳವರು ಚಾಚಿದ ಹಸ್ತವನ್ನು ತಮ್ಮ ನೇತ್ರಗಳೆರಡಕ್ಕೂ ಒತ್ತಿಕೊಂಡು ಬಹುವಿನೀತರಾಗಿ, ಭಕ್ತಿಪೂರ್ವಕವಾಗಿ ಹಿಡಿದರು. ಯಾವಾಗ ಯಾರೂಮುಂದೆ ಬರಲಿಲ್ಲವೋ, ಶ್ರೀಗಳವರು ತಮ್ಮ ಆರಾಧ್ಯ ದೈವನಾದ ಶ್ರೀಮೂಲರಾಮನನ್ನು ಭಕುತಿಯಿಂದ ಏನಪ್ಪಾ ಈ ಪರೀಕ್ಷೆಯೆಂದು ಮನದಲ್ಲಿ ಪ್ರಾರ್ಥಿಸಿದರು. ಗಾರ್ಲಪಾಡರಾಮಾಚಾರ್ಯರು ಬಂದಾಗ ತಮ್ಮ ಶ್ರೀಮೂಲರಾಮನೇ ಶ್ರೀ

ಶ್ರೀನಿವಾಸನಾಗಿ ಕರುಣೆಯನ್ನು ತೋರಿದನೆಂದು ತಿಳಿದು ಆನಂದ ತುಂದಿಲ ರಾದರು. ಶ್ರೀ ಶ್ರೀನಿವಾಸನ ದಯೆಯನ್ನು ಕೊಂಡಾಡುತ್ತಾ ಶ್ರೀ ಗಾರ್ಲಪಾಡ ರಾಮಾಚಾರ್ಯರ ಜೊತೆ, ಮಠದ ಪಂಡಿತರು, ಶಿಷ್ಯರು ಸಮೇತ ಗಿರಿಯನ್ನು ಶ್ರೀಗಳು ಆರೋಹಣ ಮಾಡಲು ಉಪಕ್ರಮಿಸಿದರು.

ಶ್ರೀ ಗಾರ್ಲಪಾಡರಾಮಾಚಾರ್ಯರು ಅದಕ್ಕೆ ಮುನ್ನ ಶ್ರೀಗಳವರಲ್ಲಿ ಸವಿನಯ ಪೂರ್ವಕವಾಗಿ ವಿನಂತಿ ಮಾಡಿಕೊಂಡರು. ಮಹಾಸ್ವಾಮಿ, ಈ ಅಲ್ಪನ ಅಳಲನ್ನು ಕೃಪೆಮಾಡಿ ಆಲಿಸಬೇಕೆಂದರು. ಗಿರಿಯನ್ನು ಏರುವ ಕಾಲದಲ್ಲಿ ತಾವು ಅನುಮತಿಸಿದರೆ, ಶ್ರೀಮನ್ನ್ಯಾಯಸುಧಾ ಗ್ರಂಥವನ್ನು ಪಠಿಸುತ್ತಾ ಹತ್ತುವೆನೆಂದರು. ಶ್ರೀಗಳವರು ಗ್ರಂಥವನ್ನು ಒಂದು ಕೈಯಲ್ಲಿ ಪಿಡಿದು ಪಠಿಸುತ್ತಾ ಹತ್ತುವುದು ಶ್ರಮಸಾಧ್ಯವಲ್ಲವೇ ಎಂದರು. ಆಗ ಆಚಾರ್ಯರು ತಮ್ಮ ಅನುಗ್ರಹದಿಂದ ಗ್ರಂಥದ ಸಹಾಯವಿಲ್ಲದೇನೆ ಶ್ರೀಮನ್ನ್ಯಾಯಸುಧಾ ಪಠನೆಯನ್ನು ಮಂಗಳ ಶ್ಲೋಕದಿಂದ ಪ್ರಾರಂಭಿಸುವು ದಾಗಿ ಹೇಳಿದರು. ಮೊದಲೇ ಹರ್ಷಚಿತ್ತರಾದ ಮಹಾಸ್ವಾಮಿಗಳು ಆಚಾರ್ಯರ ಮಸ್ತಕದ ಮೇಲೆ ಅನುಗ್ರಹ ಪೂರ್ವಕವಾಗಿ ಹಸ್ತವನ್ನು ಇಡಲು, ಶ್ರೀ ರಾಮಾಚಾರ್ಯರು ಏಕ ಪ್ರಕಾರವಾಗಿ, ಗಂಗಾ ಲಹರಿಯಂತೆ ಶ್ರೀಮನ್ನ್ಯಾಯ ಸುಧಾ ಪಠಣವನ್ನು ಪಠಣಮಾಡಲು ಪ್ರಾರಂಭಿಸಿದರು.

ಇದಲ್ಲವೇ, ಗುರುಗಳ ಅನುಗ್ರಹ, ಶಿಷ್ಯನ ಗುರುಭಕ್ತಿ. ಇಂತಹ ಅವಿನಾಭಾವ ಬಹುವಿರಳ. ಒಂದೊಂದು ಮೆಟ್ಟಲನ್ನು ಏರುತ್ತಾ ಏರು ಸ್ವರದಲ್ಲಿ ಸುಧಾ ಗ್ರಂಥವನ್ನು ಪಠಿಸುತ್ತಲಿದ್ದ ಆಚಾರ್ಯರನ್ನು ಕಂಡು ಎಲ್ಲರಿಗೂ ಆಶ್ಚರ್ಯ. ಅಲ್ಲಿದ್ದವರಲ್ಲಿ ಕೆಲವರು ಶ್ರೀ ಸತ್ಯಪೂರ್ಣರ ಅನುಗ್ರಹವೆಂದರೆ ಮತ್ತೆ ಕೆಲವರು ಇದು ರಾಮಾಚಾರ್ಯರ ಗುರುಭಕ್ತಿ, ಮತ್ತೆ ಕೆಲವರು ಇದು, ಇವೆರಡರ ಜೊತೆ ಭೂವೈಕುಂಠ ಧಾಮನ ಕರುಣಾ ಪೂರ್ಣಾನುಗ್ರಹವೆಂದು ತಮ್ಮ ತಮ್ಮಲ್ಲಿ ಅಂದುಕೊಂಡರು. ಶ್ರೀ ಸತ್ಯ ಪೂರ್ಣಗುರುಗಳು ಮತ್ತು ಶಿಷ್ಯ ಸಮೂಹವು ಶ್ರೀ ರಾಮಾಚಾರ್ಯರ ಸುಧಾ ಪಠಣದ ಆನಂದವನ್ನು ಭಕ್ತಿಯುತವಾಗಿ ಸವಿಯುತ್ತಾ ಭೂವೈಕುಂಠಧಾಮ ಶ್ರೀ ಶ್ರೀನಿವಾಸನ ನಿಲಯ ದ್ವಾರಕ್ಕೆ ಬಂದು ತಲುಪಿದರು. 24,000 ಗ್ರಂಥಗಳ ಶ್ರೀ ಮನ್ನ್ಯಾಯಸುಧಾ ಪಠಣವು ಮುಗಿಯುವುದಕ್ಕೂ ಮಹಾದ್ವಾರವನ್ನು ಸೇರುವುದಕ್ಕೂ

ಸರಿಹೋಯಿತು. ಆಗ ಪಂಡಿತರು ಶಿಷ್ಯರಾದಿಯಾಗಿ ಆಚಾರ್ಯರನ್ನು ಸಂಸ್ಥಾನದ ಮಹಾಕೂಟದಲ್ಲಿ ಸೇರಿಸಿಕೊಳ್ಳಬೇಕೆಂದು, ಶ್ರೀಗಳವರಲ್ಲಿ ವಿನಂತಿಸಿದರು. ಶ್ರೀಗಳವರು ಶ್ರೀ ಶ್ರೀನಿವಾಸನ ದಯೆಯಿಂದ ಹಾಗೆ ಆಗಿಯೇ ತೀರುವುದೆಂದು ಹೇಳಿದರು. ಯೋಗಾಯೋಗಾವೆಂಬಂತೆ ಎಲ್ಲಿಂದಲೋ ಒಂದು ಶುಕ (ಗಿಳಿ) ಹಾರಿ ಬಂದು ಮಹಾದ್ವಾರದ ಮೇಲೆ ಕುಳಿತು **ಸತ್ಯ ಸತ್ಯ ಸತ್ಯ** ಎಂದು ನುಡಿಯಿತು. ಆಗ ಎಲ್ಲರೂ ಶುಕ ಮಹರ್ಷಿಗಳು ಗಿಳಿಯಾಗಿ ಬಂದು ಶ್ರೀಗಳವರು ಹೇಳಿದ್ದನ್ನು **ಸತ್ಯ, ಸತ್ಯ, ಸತ್ಯ** ಯೆಂದು ಹೇಳಿರುವರೆಂದು ತಿಳಿದರು. ಶ್ರೀ ಸತ್ಯಪೂರ್ಣತೀರ್ಥರು ತಮ್ಮ ಪರೀಕ್ಷೆಯಲ್ಲಿ ಸಫಲರಾದ ಶ್ರೀಗಾರ್ಲಪಾಡರಾಮಾಚಾರ್ಯರಿಗೆ ಆಶ್ರಮವನ್ನಿತ್ತು **ಶ್ರೀಸತ್ಯವರ್ಯತೀರ್ಥರೆಂದು** ನಾಮಕರಣ ಮಾಡಿದರು. ಅನಂತರ ಅವರನ್ನು ದ್ವೈತಸಿದ್ಧಾಂತ ಪ್ರಚಾರ ಮಾಡಲು ಸಂಸ್ಥಾನದ ಕೆಲವು ಮೂರ್ತಿಗಳನ್ನಿತ್ತು ಸಂಚಾರಕ್ಕೆ ಕಳುಹಿಸಿದರು. ಶ್ರೀ ಗಾರ್ಲಪಾಡರಾಮಾಚಾರ್ಯರು ತಮ್ಮ ನಿಷ್ಠೆ ಯಿಂದ ಗುರುಗಳ ಅನುಗ್ರಹವನ್ನು ಪಡೆದು ಶ್ರೀ ಸತ್ಯವರ್ಯತೀರ್ಥ ಶ್ರೀ ಪಾದಂಗಳವರಾದರೆ, ಶ್ರೀ ಬಾಬಾಚಾರ್ಯರು ಗುರು ಆಜ್ಞಾಪಾಲಕರಾಗಿ ಶ್ರೀಗಳವರ ಮನಗೆದ್ದು, ಸಂತೃಪ್ತಿಗೊಳಿಸಿ ಶ್ರೀ ಸತ್ಯವಿಜಯ ಶ್ರೀ ಪಾದಂ ಗಳವರಾದರು.

ಪಾಂಡುರಂಗಿ ಮನೆತನವು ಈಗಾಗಲೇ ಹೇಳಿರುವಂತೆ ಪಾಂಡಿತ್ಯಕ್ಕೆ ಹೆಸರಾದದ್ದು. ಇದಕ್ಕೆ ನಿದರ್ಶನವಾಗಿ ಶ್ರೀ ಪಾಂಡುರಂಗಿ ಹುಚ್ಚಾಚಾರ್ಯರು, ಶ್ರೀ ಪಾಂಡುರಂಗಿ ಕೃಷ್ಣಾಚಾರ್ಯರು, ಶ್ರೀ ವೆಂಕಟರಮಣಾಚಾರ್ಯ ಪಾಂಡುರಂಗಿ, ಪಾಂಡುರಂಗಿ ಜಯಾಚಾರ್ಯರು (ಮುಂದೆ ಶ್ರೀ ಸತ್ಯಪ್ರಜ್ಞ ತೀರ್ಥರು) ರಂಥ ಅತಿರಥ ಮಹಾವಿದ್ವಾಂಸರು ಹಾಗೂ ಹಾಲಿ ದ್ವೈತ ವೇದಾಂತ ಅಧ್ಯಯನ ಸಂಶೋಧನ ಪ್ರತಿಷ್ಠಾನದ ಅಧ್ಯಕ್ಷರು ಆದ (90) ತೊಂಭತ್ತರ ಹರೆಯದ **ಶ್ರೀ ಕೆ.ಟಿ ಪಾಂಡುರಂಗಿ** ಅವರುಗಳ ಸೇವೆ ಮಾಧ್ವ ವಾಙ್ಮಯಕ್ಕೆ ಕೊಡುಗೆ ಅಸಾಮಾನ್ಯ. ಶ್ರೀ ಕೆ.ಟಿ. ಪಾಂಡುರಂಗಿಯವರು 18ಕ್ಕೂ ಹೆಚ್ಚಾದ ಗ್ರಂಥಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಈಶಾವಾಸ್ಯ, ತಲವಕಾರ, ಕಾಠೋಪನಿಷತ್ತುಗಳು, ಅಣುವಿದ್ಯಾಧೀಶ ವಿಜಯ, (ಇದರಿಂದ ಈ ಹೊತ್ತಿಗೆಯನ್ನು ಬರೆಯಲು ಸಾಕಷ್ಟು ವಿಷಯಗಳನ್ನು ಬಳಸಿ

ಕೊಳ್ಳಲಾಗಿದೆ) Essentials of Gita Bhashya and Tatparya ವನ್ನು ಉದಾಹರಿಸಬಹುದು. ಇವರಿಗೆ ವಿವಿಧ ಮಠಾಧಿಪತಿಗಳು, ಸಂಸ್ಥೆಗಳು, **ಮೀಮಾಂಸಾಭೂಷಣ, ಶಾಸ್ತ್ರನಿಧಿ, ಪ್ರವಚನಪಟು, ದರ್ಶನರತ್ನ** ಎಂಬ ಬಿರುದುಗಳನ್ನು ನೀಡಿ ಗೌರವಿಸಿದ್ದಾರೆ.

ಗುರುಭಕ್ತಿದುರಂಧರರಾದ ಶ್ರೀ ಬಾಬಾಚಾರ್ಯರು ಹರಿದ್ರಾನದಿಯ ದಂಡೆಯ ಮೇಲೆ ಮಾಡುತ್ತಿದ್ದ ಯಾಗವನ್ನು ಮಧ್ಯೆದಲ್ಲಿಯೇ ನಿಲ್ಲಿಸಿ ಯಾಗ ದ್ರವ್ಯಗಳನ್ನು ನದಿಗೆ ಹಾಕಿ ತನ್ನ ಗುರುಭಕ್ತಿಯನ್ನು ಪ್ರದರ್ಶಿಸಿ, ಶ್ರೀ ಸತ್ಯಪೂರ್ಣರಿಂದ ಆಶ್ರಮ ಪಡೆದರು. ಶ್ರೀ ಸತ್ಯಪೂರ್ಣರಿಂದ ಈಗಾಗಲೇ ಆಶ್ರಮವನ್ನು ಪಡೆದಿದ್ದ ಶ್ರೀಸತ್ಯವರ್ಯರು ಕಿರಿಯ ಸಂಸ್ಥಾನದೊಂದಿಗೆ ಸಂಚಾರ ಕ್ರಮದಲ್ಲಿದ್ದರು. ಶ್ರೀ ಸತ್ಯಪೂರ್ಣತೀರ್ಥರು ತಮ್ಮ ಕರಕಮಲ ಸಂಜಾತರಾದ ನೂತನ ಶ್ರೀಗಳೊಂದಿಗೆ (ಶ್ರೀ ಸತ್ಯವಿಜಯರು) ಸಂಚಾರ ಹೊರಟರು. ಯತಿದ್ವಯರು ಕರ್ಣಾಟಕದ ಕೆಲವು ಭಾಗಗಳಲ್ಲಿ ಕೈಗೊಂಡರು.

ತತಃ ಕರ್ನಾಟಕಂ ಗತ್ವಾ ಶ್ರೀ ಸತ್ಯವಿಜಯೈಃ ಸಹ
ಕೃತ್ವಾದಿಗ್ವಿಜಯಂ ತತ್ರಮಾನಿತಾಃ ಪ್ರಭುಶೇಖರೈಃ

ಸಂಚಾರದುದ್ದಕ್ಕೂ ರಾಜಮಹಾರಾಜರಿಂದ ಮನ್ನಣೆಯನ್ನು ಹೊಂದಿದರು. ಮುಂದೆ, ಶ್ರೀಸತ್ಯಪೂರ್ಣರು ಶಿಷ್ಯರಾದ ಶ್ರೀ ಸತ್ಯವಿಜಯರಿಗೆ ತಾವು ಭಾಗೀರಥಿ ಯಾತ್ರೆ ಮಾಡುವ ಉದ್ದೇಶವನ್ನರುಹಿದರು.

ತತೋ ಭಾಗೀರಥೀಯಾತ್ರಾಂ ಕುರ್ತುಂ ಸಂಸ್ಥಾನ ಸಂಯುತಾಃ
ಶ್ರೀ ಸತ್ಯವಿಜಯೈಃ ಸಾಕಂ ನಿರ್ಗತಾಃ ಚೋಲಮಂಡಲಾತ್ ॥5॥

ಅಲ್ಲದೇ ಸಂಸ್ಥಾನ ಸಮೇತ ಶ್ರೀ ಸತ್ಯವಿಜಯರೊಂದಿಗೆ ಚೋಳಮಂಡಲ (ದೇಶ)ಕ್ಕೆ ಹೊರಟರು. ಅಲ್ಲಿಂದ ಮುಂದೆ ಶ್ರೀ ಸತ್ಯಪೂರ್ಣರು ಗಂಗಾಯಾತ್ರೆ ಕೈಗೊಂಡರು. ಶ್ರೀ ಸತ್ಯವಿಜಯರಾದರೋ ಗುರುಗಳ ಆಜ್ಞಾದಂತೆ ಮಹಾ ಸಂಸ್ಥಾನದೊಂದಿಗೆ ಸಂಚರಿಸುತ್ತಾ ಕುರಿಷ್ಟಟಂ ಎಂಬ ಸ್ಥಳಕ್ಕೆ ಬಂದರು. ಹಾಗೇ ಮುಂದುವರೆದು ಆಜಾದ್ರಿಗೆ ಬಂದರು. ಈಗಾಗಲೇ ಶ್ರೀ ಸತ್ಯಪೂರ್ಣರಿಂದ ಆಶ್ರಮವನ್ನು ಹೊಂದಿದ್ದ ಶ್ರೀ ಸತ್ಯವರ್ಯರು ಸಹ ಆಜಾದ್ರಿಗೆ ತಮ್ಮ ಸಂಚಾರವನ್ನು ಮುಗಿಸಿ ಬಂದರು.

ಯದಾತು ಅಜಾದ್ರಿಮಾಸುಸ್ತೇ ಶ್ರೀ ಸತ್ಯವಿಜಯಾಭಿದಾಃ
ಸತ್ಯವರ್ಯಾ ಅಪಿ ತದಾತತ್ಸಮೀಪೆ ಸಮಾಗತಾಃ

ಒಂದು ಐತಿಹ್ಯದ ಪ್ರಕಾರ, ಶ್ರೀ ಸತ್ಯಪೂರ್ಣರು ಗಾರ್ಲಪಾಡು ರಾಮಾಚಾರ್ಯರಿಗೆ ಆಶ್ರಮವನ್ನಿತ್ತ ನಂತರ, ಅಣು ಸಂಸ್ಥಾನ ವಹಿಸಿದ ಮೇಲೆ ಅವರಿಗೆ ಶ್ರೀಸತ್ಯವರ್ಯರಲ್ಲಿ (ಗಾರ್ಲಪಾಡು ರಾಮಾಚಾರ್ಯರು) ಅಸಮಾಧಾನ ವುಂಟಾಯಿತಂತೆ, ಆದರೆ ಶ್ರೀ ಸತ್ಯವಿಜಯಸ್ತೋತ್ರದಲ್ಲಿ..... 3ನೇ ಸ್ತೋತ್ರದಲ್ಲಿ

ಸತ್ಯಪೂರ್ಣಾಬ್ಧಿ ಸಂಭೂತಂ ಭಕ್ತಸ್ವಾಂತೋತ್ಪಲಂ ಸದಾ
ವಿಕಾಸಯಂತು ಸಂಶುದ್ಧಂ ಸತ್ಯಜೈತ್ರೇಂದುಮಾಶ್ರಯೇ ॥3॥

ಎಂದು ಸ್ತುತಿಸಿದ್ದಾರೆ. ಶ್ರೀಸತ್ಯಪೂರ್ಣರೆಂಬ ಸಾಗರದಿಂದ ಉದಯಿಸಿದ, ಶ್ರೀ ಸತ್ಯವಿಜಯರನ್ನು ಆಶ್ರಯಿಸುವೆನು ಎಂದಿದ್ದಾರೆ (ಇದು ಸತ್ಯಪ್ರಿಯರ ಸ್ತೋತ್ರವೆಂದು ಪ್ರಚಲಿತವಾಗಿದೆ. (ದಂಡವ್ಯತ್ಯಾಸಕ್ಕೆ ಮುಂಚೆ ಶ್ರೀ ಸತ್ಯಪ್ರಿಯರ ನಾಮಧೇಯ ಶ್ರೀ ಸತ್ಯವರ್ಯರು) ಅಲ್ಲದೇ, ಶ್ರೀ ಸತ್ಯಪೂರ್ಣರು, ಆಶ್ರಮಪೂರ್ವದಲ್ಲಿ ಗಾರ್ಲಪಾಡ ರಾಮಾಚಾರ್ಯರ ಗುರುಭಕ್ತಿ ಹಾಗೂ ವಿದ್ವತ್ತನ್ನು ಮನ್ನಿಸಿ ಆಶ್ರಮವಿತ್ತರೆಂದರೆ, ಶ್ರೀ ಸತ್ಯವರ್ಯರಲ್ಲಿ ಅಸಮಾಧಾನ ವುಂಟಾಯಿತ್ತೆಂದರೆ, ಅದು ಅಷ್ಟು ಸಮಂಜಸವಾಗಿ ಕಾಣುವುದಿಲ್ಲ. ಆದರೆ, ಇನ್ನೊಂದು ದೃಷ್ಟಿಕೋನದಲ್ಲಿ ನೋಡಿದರೆ ಅಸಮಾಧಾನ ವಾಸ್ತವವೆಂದು ತೋರುತ್ತದೆ. ಶ್ರೀ ಸತ್ಯವರ್ಯರಾದರೋ ಆಶ್ರಮ ಜ್ಯೇಷ್ಠರು. ಶ್ರೀ ಸತ್ಯ ವಿಜಯರು ಆಶ್ರಮ ಕಿರಿಯರು. ಆಶ್ರಮ ಕಿರಿಯರು ಮಹಾಸಂಸ್ಥಾನವನ್ನು, ಜ್ಯೇಷ್ಠರಾದವರು ಅಣುಸಂಸ್ಥಾನವನ್ನು ಹೊಂದಿರುವುದು ಒಂದು ಬಗೆಯ ಅಸಮಾಧಾನವೇ. ಇದಕ್ಕೆ ಪುಷ್ಟಿಯಾಗಿ

ಲಕ್ಕುಂಡಿ ಸಂಸ್ಥಿತಾನಂದತೀರ್ಥಾಚಾರ್ಯಃ ತತಃ ಪರಮ್
ಹೃದಾ ವಿಚಾರಯಮಾಸುಃ ಆಗ್ರೇಕಾಯಂದ್ವಿಜೋತ್ತಮಃ

ಗುರುಗಳಾದ ಶ್ರೀ ಸತ್ಯಪೂರ್ಣರಲ್ಲಿ ಭಾಗಶಃ ಅಸಮಾಧಾನವಿದ್ದರೂ, ಸ್ವಾಭಾವಿಕವಾಗಿ ಆಶ್ರಮ ಕಿರಿಯರಾದ ಶ್ರೀ ಸತ್ಯವಿಜಯರಲ್ಲಿ ಅಸಮಾಧಾನ ವಿದ್ದಿರಬಹುದು.

ಶ್ರೀಲಕ್ಕುಂಡಿ ಆನಂದತೀರ್ಥಾಚಾರ್ಯರು, ಆಜಾದ್ರಿಯಲ್ಲಿ ಶ್ರೀ ಸತ್ಯವಿಜಯ ಹಾಗೂ ಶ್ರೀ ಸತ್ಯವರ್ಯರೂ ಸಂಧಿಸಿದ ಸಂದರ್ಭವನ್ನು ಬಳಸಿಕೊಂಡು ಉಭಯ ಶ್ರೀಗಳಲ್ಲಿ ಸಾಮರಸ್ಯವುನ್ನುಂಟು ಮಾಡಲು ಬಹಳ ಶ್ರಮ ವಹಿಸಿ ಒಂದು ಪರ್ಯಾಯ ಪರಿಹಾರವನ್ನು ಸೂಚಿಸಿದರು.

ಮಹಾಸಂಸ್ಥಾನ ಸಂಯುಕ್ತಾಃ ಶ್ರೀಸತ್ಯವಿಜಾಭಿದಾಃ
ವಯಸಾಚ ಅತಿವೃದ್ಧಾಹಿಪರಂತು ಆಶ್ರಮತೋಧಮಾಃ
ಅಣು ಸಂಸ್ಥಾನ ಸಂಯುಕಾಃ ಸಮರ್ಥಾಃ ಕಾರ್ಯಸಾಧನೇ
ಆಶ್ರಮೇ ಶ್ರೀಸತ್ಯವರ್ಯಾಃ ಜ್ಯೇಷ್ಠಾಶ್ಚವಯಸಾऽಧಮಾಃ

ಮಹಾಸಂಸ್ಥಾನವನ್ನು ವಯಸ್ಸಿನಲ್ಲಿ ಹಿರಿಯರೂ ಆದರೆ ಆಶ್ರಮದಲ್ಲಿ ಕಿರಿಯರಾದ ಶ್ರೀ ಸತ್ಯವಿಜಯತೀರ್ಥರಿಗೂ ಮತ್ತು ವಯಸ್ಸಿನಲ್ಲಿ ಕಿರಿಯರೂ ಆದರೆ ಆಶ್ರಮ ಜ್ಯೇಷ್ಠರಾದ ಶ್ರೀ ಸತ್ಯವರ್ಯರಿಗೆ ಅಣುಸಂಸ್ಥಾನವನ್ನು ಎಂದು ಉಭಯ ಶ್ರೀಗಳವರ ಮನಸ್ಸನ್ನು ಒಲಿಸಲು ಸಮರ್ಥರಾದರು. ಅಂತಯೇ, ಕಾರ್ಯಾಧ್ಯಕ್ಷರು ಸಮರ್ಥರು ಆದ ಶ್ರೀ ಸತ್ಯವರ್ಯರು ತಮ್ಮ ಗುರುಗಳಾದ ಶ್ರೀ ಸತ್ಯಪೂರ್ಣತೀರ್ಥರಲ್ಲಿದ್ದ ಭಕ್ತಿಯಿಂದ ಸಹಮತವನ್ನು ತೋರಿದರು. ಉಭಯ ಶ್ರೀಗಳು ಅದನ್ನು ಕಾರ್ಯಗತಮಾಡಲು ದಂಡ ವ್ಯತ್ಯಾಸ ಮಾಡಿಕೊಂಡರು. ಶ್ರೀ ಸತ್ಯವಿಜಯರು ಮಹಾ ಸಂಸ್ಥಾನವನ್ನು ಮತ್ತು ಶ್ರೀ ಸತ್ಯವರ್ಯರು ಅಣುಸಂಸ್ಥಾನವನ್ನು ಪಡೆದರು. ಶ್ರೀ ಸತ್ಯವಿಜಯರು, ಶ್ರೀ ಸತ್ಯವರ್ಯರಿಗೆ ಪುನಃ ಹೊಸದಾಗಿ ನಾಮಕರಣ ಮಾಡಿ ಶ್ರೀ ಸತ್ಯಪ್ರಿಯರೆಂದು ಕರೆದರು.

ಏವಾಂ ತೇಷಾವಚಃ ಶ್ರುತ್ವಾಶ್ರೀ ಪಾದೌ ತಾವು ಭಾವ ಪಿ
ಕೃತ್ವಾಪರಸ್ಪರಂ ದಂಡವ್ಯತ್ಯಾಸಂ ತ್ವೈಕಮತ್ಯತಃ
ಮತ್ವಾಸಂಸ್ಥಾನ ಸಂಯುಕ್ತಾಃ ಶ್ರೀಸತ್ಯವಿಜಯಾಭಿದಾಃ
ದದುಃ ಶ್ರೀಸತ್ಯವಯೋಭ್ಯೋನಾಮ ಸತ್ಯನಾಮ ಪ್ರಿಯಾ ಇತಿ ||5||

ಶ್ರೀ ಸತ್ಯವಿಜಯರು ಅಲ್ಲಿಂದ ಮುಂದಕ್ಕೆ ಕರ್ನಾಟಕ ರಾಜ್ಯದಲ್ಲಿ ಸಂಚಾರ ಕೈಗೊಂಡರು. ಹಾಗೇ ಬರುವ ದಾರಿಯಲ್ಲಿ ಷಡಾರಣ್ಯಕ್ಕೆ ಬಂದರು. ಷಡಾರಣ್ಯಕ್ಕೆ ಮತ್ತೊಂದು ಹೆಸರು ಆರ್ಕಾಟ್. ಆರ್ಕಾಟಿನಿಂದ ಆರಣಿಗೆ

ಹೋದರು. ಈ ಮಧ್ಯೆ ಶ್ರೀ ಸತ್ಯಪೂರ್ಣರು ತಾವು ಕೈಗೊಂಡಿದ್ದ ಭಾಗೀರಥಿ ಯಾತ್ರೆಯನ್ನು ಯಶಸ್ವಿಯಾಗಿ ಮುಗಿಸಿಕೊಂಡು ಕೋಲ್‌ಪುರಕ್ಕೆ ಬಂದರು. ಕೋಲ್‌ಪುರದಲ್ಲಿ ಶ್ರೀಗಳಿಗೆ ದೇಹಾಲಸ್ಯವುಂಟಾಯಿತು. ಶ್ರೀ ಸತ್ಯವಿಜಯರು ಹಾಗೂ ಶ್ರೀ ಸತ್ಯಪ್ರಿಯರು ತಮ್ಮ ಗುರುಗಳನ್ನು ಆ ವೇಳೆಗೆ ನೋಡಲು ಬಂದಿದ್ದು ಅವರ ಜೊತೆಯಲ್ಲಿದ್ದರು. ಅಂದು ಪರಾಭವ ಸಂವತ್ಸರದ ಜ್ಯೇಷ್ಠ ಮಾಸದ ಕೃಷ್ಣಪಕ್ಷದ ಬಿದಿಗೆ, ಶ್ರೀ ಸತ್ಯಪೂರ್ಣತೀರ್ಥರು ತಮ್ಮ ಶಿಷ್ಯದ್ವಯ ರಾದ ಶ್ರೀ ಸತ್ಯವಿಜಯತೀರ್ಥರು ಹಾಗೂ ಶ್ರೀ ಸತ್ಯಪ್ರಿಯತೀರ್ಥರು (ಶ್ರೀಸತ್ಯವರ್ಯರು) ರೊಡಗೂಡಿ, ಶ್ರೀಮೂಲರಾಮ ಶ್ರೀಸೀತಾದೇವಿ, ಶ್ರೀ ದಿಗ್ವಿಜಯರಾಮರನ್ನು ಮನತಣಿಯುವಂತೆ ಪೂಜೆ ಮಾಡಿದರು. ಶಿಷ್ಯದ್ವಯ ರಿಗೆ ತೀರ್ಥವನ್ನಿತ್ತು, ಬ್ರಾಹ್ಮಣ–ಸುವಾಸಿನಿಯರಿಗೆ ಭೂರಿ ಭೋಜನ ಮಾಡಿಸಿದರು. ಶಿಷ್ಯದ್ವಯರನ್ನು ಕರೆದು ತಮ್ಮನ್ನು ಶ್ರೀಮೂಲರಾಮನು ಕರೆಯುತ್ತಿರುವನು, ತಮ್ಮ ಇಹಲೋಕದ ವ್ಯಾಪಾರ ಮುಗಿಯಿತು ಎಂದು ಹೇಳಿದರು. ಶ್ರೀ ಸತ್ಯವಿಜಯರಿಗೆ ಹಾಗೂ ಶ್ರೀ ಸತ್ಯಪ್ರಿಯರಿಗೆ ಏನು ಹೇಳಲು ತೋಚಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ ಮಹಾಸ್ವಾಮಿಗಳು ಶ್ರೀ ಸತ್ಯ ವಿಜಯರನ್ನು ಕರೆದು ನೀವು ನಿಮ್ಮ ನಂತರ ಶ್ರೀ **ಸತ್ಯಪ್ರಿಯರಿಗೇನೆ** ಸಂಸ್ಥಾನವನ್ನು ವಹಿಸಬೇಕೆಂದು ಮತ್ತೆ ಬೇರೆ ಯಾರಿಗೂ ನೀಡಬಾರದೆಂದು ಹೇಳಿದರು.

ವಿಶ್ವಕಲ್ಯಾಣಕ್ಕೋಸ್ಕರ ಜನುಮ ತಾಳಿದ ಯತಿಶ್ರೇಷ್ಠರು ಶ್ರೀ ಸತ್ಯ ಪೂರ್ಣರು. ನೋಡು ನೋಡುತ್ತಿದ್ದಂತೆಯೇ ತಮ್ಮ ದೇಹವನ್ನು ತ್ಯಜಿಸಿ ವೈಕುಂಠಧಾಮನಾದ ಶ್ರೀ ಮೂಲರಾಮನ ಪಾದವನ್ನು ಸೇರಿದರು. ಶ್ರೀ ಸತ್ಯ ವಿಜಯರು, ಶ್ರೀ ಸತ್ಯಪ್ರಿಯರು ಇಬ್ಬರು ಸೇರಿ ತಮ್ಮ ಗುರುಗಳ ಬೃಂದಾವನ ವನ್ನು ನಿರ್ಮಿಸಿ ವಿದ್ವಾಂಸರಿಗೂ, ಪಂಡಿತ ಪಾಮರರಿಗೂ, ಬ್ರಾಹ್ಮಣ, ಸುವಾಸಿನಿಯರಿಗೂ ಭೂರಿ ಭೋಜನ ಮಾಡಿಸಿದರು. ಯಥೇಚ್ಛವಾಗಿ ಹಿರಣ್ಯದಾನ, ರಜತದಾನ, ಕೈತುಂಬ ವರಹಗಳನಿತ್ತು ಸಂತೃಪ್ತಿ ಪಡಿಸಿದರು.

ವೃಂದಾವನ ಮಭೂತ್ತತ್ರ ಶ್ರೀಸತ್ಯವಿಜಯಾಜ್ಞಯಾ
ಸಮರಾಧನ ಪೂರ್ವಂತೇ ಚಕ್ರುಃ ಸತ್ಯಪ್ರಿಯೈಃ ಸಹ

ಶ್ರೀ ಸತ್ಯಪೂರ್ಣತೀರ್ಥರ ಆಶ್ರಮಪೂರ್ವದ ಹೆಸರು ಶ್ರೀ ಕೃಷ್ಣಾಚಾರ್ಯರೆಂತಲೂ (ಶ್ರೀ ಸತ್ಯ ವಿಜಯಚರಿತಂ) ಇವರ ಬೃಂದಾವನವು ಆಂಧ್ರಪ್ರದೇಶದ ಮಹಬೂಬ್‌ನಗರದ ಜಿಲ್ಲೆಯಲ್ಲಿದ್ದು ಮಟ್ಕಲ್‌ನಿಂದ 18 ಕಿ.ಮಿ. ಸಮೀಪದಲ್ಲಿದೆ. ಇವರು 20 ವರ್ಷ ನಾಲ್ಕು ದಿವಸಗಳು ಸರ್ವಜ್ಞಪೀಠವನ್ನು ಅಲಂಕರಿಸಿದ್ದರು. ಕೃಷ್ಣಾನದಿ ದಂಡೆಯ ಮೇಲೆ ಪ್ರಶಾಂತ ವಾತಾವರಣದಲ್ಲಿ ಕೋಲ್‌ಪುರದಲ್ಲಿ ಇವರ ವೃಂದಾವನವಿದೆ.

ಶ್ರೀ ಸತ್ಯವಿಜಯತೀರ್ಥರು ಮುಂದೆ, ಮಹಾಸಂಸ್ಥಾನದ ಜೊತೆ ಆರ್ಕಾಟ್ ನವಾಬನ ದಿವಾನನಾದ ಶ್ರೀ ಕೃಷ್ಣಾಜಿ ಪಂತನ ಆಹ್ವಾನವನ್ನು ಮನ್ನಿಸಿ ಆರ್ಕಾಟ್‌ಗೆ ಹೊರಟರು. ಶ್ರೀ ಸತ್ಯಪ್ರಿಯರು ಅಣು ಸಂಸ್ಥಾನದ ಎಲ್ಲಾ ವಸ್ತುಗಳ ಸಹಿತ ದಿಗ್ವಿಜಯ ಹೊರಟರು.

ತತಃ ಸರ್ವಾಣು ಸಂಸ್ಥಾನ ಪದಾರ್ಥಾದೀನ್ಗುರುತ್ತಮಾಃ
ದತ್ವಾ ಸತ್ಯಪ್ರಿಯಾಖೇಭ್ಯಃ ಶ್ರೀ ಸತ್ಯವಿಜಯಾಭಿದಾಃ

ಕೃಷ್ಣಾಜಿಪಂತನು ಪೂರ್ವದಲ್ಲಿ ಕಡು ಬಡತನದಿಂದ ಬೇಯುತ್ತಿದ್ದು, ಹೇಗಾದರೂ ಮಾಡಿ ಶ್ರೀಮೂಲರಾಮ ದೇವರಿಗೆ ತುಪ್ಪದ ದೀಪವನ್ನು ಹಚ್ಚಲು ಎರಡು ಬೆಳ್ಳಿ ನಿಲಾಂಜನ ಮಾಡಿಸಬೇಕೆಂದು ನಿಶ್ಚಯಿಸಿ ತನ್ನ ದಿನದ ಖರ್ಚನ್ನು ಕಡಿತಗೊಳಿಸಿ ಮಹಾಸ್ವಾಮಿಗಳಾದ ಶ್ರೀ ಸತ್ಯಪೂರ್ಣರಿಗೆ ಅರ್ಪಿಸಿದನು. ದೀಪವನ್ನು ಹಚ್ಚಬೇಕೆಂದು ಅವರ ಪಾದಾರವಿಂದಗಳಿಗೆ ನಮಸ್ಕರಿಸಿದನು. ಇವನ ಬಡತನದ ವಿಷಯವನ್ನು ತಿಳಿದ ಶ್ರೀಗಳವರು ಅವನ ಗುರುಭಕ್ತಿಯನ್ನು ಮನಗೊಂಡು ಅವನ ಪ್ರಾರ್ಥನೆಯನ್ನು ಸ್ವೀಕರಿಸಿದರು. ಅಲ್ಲದೇ ಅವನಿಗೆ ಪಾದಪೂಜಾ ಮಾಡುವ ಸೌಭಾಗ್ಯವನ್ನು ಒದಗಿಸಿದರು. ಪಾದಪೂಜಾನಂತರ ಅವನ ಶಿರದ ಮೇಲೆ ಮಂತ್ರಾಕ್ಷತೆಯ ಮಹಾಪೂರವನ್ನೆ ಸುರಿಸಿದರು. ನಾಲ್ಕು ಕಾಳು ಮಂತ್ರಾಕ್ಷತೆಯನ್ನು ನೀಡಿದರೆ ಸರ್ವ ಕಾರ್ಯಸಿದ್ಧಿಸುವುದು, ಮಂಗಳವುಂಟಾಗುವುದು. ಅಂತಹದರಲ್ಲಿ ಮಂತ್ರಾಕ್ಷತೆಯ ಮಹಾಪೂರವನ್ನೆ ಮಾಡಿದರೆ ಕೃಷ್ಣಾಜಿಪಂತನ ಪುಣ್ಯಕ್ಕೆ ಎಣೆಯೇ ಇಲ್ಲ. ಶ್ರೀ ತುಕೋಪಂತನು ಪಂತ ವಂಶಸ್ಥರ ಮೂಲಪುರುಷ. 1502ನೇ ಇಸವಿಯಲ್ಲಿ ಪುಣೆಯ ಬಳಿ ಇದ್ದ ಔಂದ್‌ನಲ್ಲಿ ವಾಸವಾಗಿದ್ದನು.

ಅವನ ನಂತರ ಬಂದವರಲ್ಲಿ ಒಬ್ಬನಿಗೆ ಮೂರು ಜನ ಗಂಡು ಮಕ್ಕಳು. ಒಬ್ಬನು ಭಾಸ್ಕರ್‌ಪಂತ್, ಎರಡನೆಯವನು ಗೋವಿಂದ ವಲ್ಲಭಪಂತ್, ಮೂರನೆಯವನು ಅಪ್ಪಾಸಾಹೇಬ್ ಪಂತ್. ಅವರಲ್ಲಿ ಭಾಸ್ಕರ ಪಂತನ ಪೀಳಿಗೆಯಲ್ಲಿ ಬಂದವರಲ್ಲಿ ಕೃಷ್ಣಾಜಿಪಂತನು, ಹಾಗೂ ವೆಂಕೋಜಿಪಂತನು ಮುಖ್ಯರು.

ಶ್ರೀಗಳವರ ಅತಿಶಯವಾದ ಆಶೀರ್ವಾದದಿಂದ ಕೃಷ್ಣೋಜಿಪಂತನು ಆರ್ಕಾಟ್ ನವಾಬನಲ್ಲಿ ದಿವಾನನಾದನು. ಅದೇ ಕೃಷ್ಣಾಜಿಪಂತನು ಶ್ರೀ ಸತ್ಯಪೂರ್ಣತೀರ್ಥರ ಶಿಷ್ಯರಾದ ಶ್ರೀ ಸತ್ಯವಿಜಯರನ್ನು ಆಹ್ವಾನಿಸಿ, ತನ್ನಲ್ಲಿ ಕರೆಸಿಕೊಂಡು ಬಹುರೀತಿಯಲ್ಲಿ ಸನ್ಮಾನಿಸಿ ಗೌರವಿಸಿದನು. ಅವನ ಸತ್ಕಾರ ವನ್ನು ಸ್ವೀಕರಿಸಿ ಕೆಲಕಾಲ ಅಲ್ಲಿಯೇ ಇದ್ದರು.

ತತಃ ಕೃಷ್ಣಾಖ್ಯಪಂತೇ ಮತೆ ಮುಖ್ಯಭಿಮಾನಿನಾ
ಪೂಜಿತಾಃ ಕತಿಚಿತ್‌ಕಾಲ ಮಾಸುಸ್ತೇ ಸ್ವೇಚ್ಛಯಾ ಸುಖಮ್

ಕೃಷ್ಣಾಜಿ ಪಂತನು ಶ್ರೀಮೂಲರಾಮ ಸೀತಾದೇವಿಯರ ಪೂಜೆಗೋಸ್ಕರ ಬಂಗಾರದ ಪೀಠ, "ವಜ್ರಖಚಿತವಾದ ಸಂಪುಟ", ರತ್ನ ಖಚಿತವಾದ ಆಭರಣಗಳನ್ನು ಶ್ರೀಗಳವರಿಗೆ ಸಮರ್ಪಿಸಿದನು. ಇಂದಿಗೂ ಶ್ರೀಮದುತ್ತರಾದಿ ಮಠದಲ್ಲಿವೆ. ಆಗ ಕೆಲವು ದುರ್ಮತಿಗಳು ಇದೇ ಸರಿಯಾದ ಸಮಯವೆಂದು ಬಗೆದು ಶ್ರೀ ಸತ್ಯವಿಜಯತೀರ್ಥರ ಮನಸ್ಸನ್ನು ಕೆಡಿಸಿ ಶ್ರೀ ಸತ್ಯಪ್ರಿಯರನ್ನು ಬಿಟ್ಟು ಮತ್ತೊಬ್ಬರಿಗೆ ಸಂಸ್ಥಾನವನ್ನು ಕೊಡಿಸಲು ವ್ಯವಸ್ಥಿತ ಸಂಚು ಮಾಡಿದರು. ಗುರು ಭಕ್ತಿ ದುರಂಧರರಾದ ಶ್ರೀ ಸತ್ಯವಿಜಯರು ಮೊಳಕೆಯಲ್ಲಿ ಚಿಗುಟಿ ಹಾಕಿದರು. ತಾವು ತಮ್ಮ ಗುರುಗಳಾದ ಶ್ರೀ ಸತ್ಯಪೂರ್ಣತೀರ್ಥರ ಅಣತಿಯಂತೆ ಶ್ರೀ ಸತ್ಯಪ್ರಿಯರಿಗಲ್ಲದೇ ಮತ್ಯಾರಿಗೂ ಕೊಡುವುದಿಲ್ಲವೆಂದು ಹೇಳಿ ಆ ವಿಷಯಕ್ಕೆ ಪೂರ್ಣವಿರಾಮ ಹಾಕಿದರು. ಆದರೆ, ಅಣು ಸಂಸ್ಥಾನ ಸಮೇತ ಸಂಚಾರದಲ್ಲಿದ್ದ ಶ್ರೀ ಸತ್ಯಪ್ರಿಯರಿಗೆ ಇದು ಹೇಗೋ ಕರ್ಣಾಕರ್ಣಿ ಯಾಗಿ ತಿಳಿದು ಸ್ವಲ್ಪ ಮನನೊಂದರು ಹಾಗೂ ಶ್ರೀ ಸತ್ಯವಿಜಯರ ನಿರ್ದುಷ್ಟ ವಾದ ನಿಲುವನ್ನು ನೋಡಿ ಸಂತುಷ್ಟರಾದರು. ಆದರೂ ಈ ವಿದ್ಯಮಾನ ಗಳಿಂದ ಮನನೊಂದ ಶ್ರೀ ಸತ್ಯಪ್ರಿಯರು ಶ್ರೀ ಮೂಲರಾಮನ ದಯೆ

ಯೊಂದಿದ್ದರೆ ತಮಗೆ ಅವನ ಪೂಜಾ ಸೌಭಾಗ್ಯ ದೊರೆಯುವುದೆಂದು ಅವನ ಚರಣಾರವಿಂದವನ್ನೆ ನಂಬಿ, ಶ್ರೀ ಸತ್ಯವಿಜಯರ ಕಡೆಗೆ ಬರಲಿಲ್ಲ.

ಸತ್ಯಪ್ರಿಯಾಃ ತದಖಿಲಂ ಶ್ರುತ್ವಾಸ್ವೀಯ ಜನ್ಯೈಃ ತತಃ
ಆರ್ಯಾಣಾಮಂತಿಕಂ ನೈವಗತಾಃ ವ್ಯತ್ಯಸ್ತ ಚೇತಸಃ

ಶ್ರೀ ಸತ್ಯವಿಜಯತೀರ್ಥರು ಆಗಲೇ ವಯಸ್ಸಾಗಿದ್ದವರಾಗಿದ್ದರಿಂದ ಬಹುದೂರ ಸಂಚಾರ ಕೈಗೊಳ್ಳದೇ, ಚೋಲದೇಶದಲ್ಲಿ ದಿಗ್ವಿಜಯ ಕೈಗೊಂಡರು. ಮಹಾಸ್ವಾಮಿಗಳಿಗೆ ವೃದ್ಧಾಪ್ಯವೊಂದಾದರೆ ಮತ್ತೊಂದಡೆ ಶ್ವಾಸರೋಗ ಪೀಡಿತರಾಗಿದ್ದರು. ಆಗ ಶ್ರೀಗಳು ಅರಣಿಯ ಕಡೆ ಸಂಚಾರ ವನ್ನು ಮುಂದುವರೆಸಿದರು. ಅರಣಿಯ ವೆಂಕಟರಾಜನು ಮಹಾಸ್ವಾಮಿಗಳ ಪರಮಭಕ್ತನಾಗಿದ್ದನು. ಈ ವೆಂಕಟರಾಜನನ್ನು ವೆಂಕಾಜಿ ಪಂತನೆಂದೂ ಕರೆಯುತ್ತಿದ್ದರಂತೆ. ಇವರಿಬ್ಬರೂ ಛತ್ರಪತಿ ಮಹಾರಾಜ್ ಶಿವಾಜಿಯ ತಂದೆ ಶಹಾಜಿಯ ಸರದಾರನಾಗಿದ್ದ ವೇದೇಜಿ ಭಾಸ್ಕರನ ವಂಶದವರಂತೆ. ದೇಶಸ್ಥ ವಾಣಿ ನವೆಂಬರ್ 2010ರ ಸಂಚಿಕೆಯಲ್ಲಿ ಪುಟ 11 ರಲ್ಲಿ ತೋರಿಸಿರುವ ವಂಶಾವಳಿಯ ವಿಷಯದಲ್ಲಿ ಆಯ್ದ ಭಾಗವನ್ನು ಕೆಳಗೆ ಕಂಡಂತೆ ತೋರಿದೆ.

"Bhaskar panth migrated along with Shivaji Maharaj's Father in 1590 towards south and got the Jagir of Arni in 1610.......Rao shaib title was given to the family by Arcot Navab. Eventoday Satya Vijayanagar near Arni the capital has.......palace and Uttaradi Mutt branch."

ವೇದೋಜಿ ಭಾಸ್ಕರನು ಶ್ರೀ ಸತ್ಯವಿಜಯತೀರ್ಥರ ಪರಮಗುರುಗಳಾದ ಶ್ರೀ ಸತ್ಯಾಭಿನವತೀರ್ಥರ ಕಾಲದಲ್ಲಿ ಬಹುವಿಧವಾಗಿ ಶ್ರೀಮಠಕ್ಕೆ ನಡೆದು ಕೊಂಡಿದ್ದನ್ನು ಸ್ಮರಿಸಬಹುದು. (ಇದೇ ಲೇಖಕರ **ಗುರು ಭಕ್ತಾಭಿನವ ಶ್ರೀ ಸತ್ಯಾಭಿನವತೀರ್ಥರು** ಪುಸ್ತಕ ನೋಡುವುದು). ಅರಣಿಯಲ್ಲಿಯೇ ವೆಂಕಾಜಿ ಪಂತನ ಅರಮನೆಯಲ್ಲಿ ಶ್ರೀಮೂಲರಾಮ ಸೀತಾದೇವಿಯರ ಪೂಜಾ ನಿರತರಾಗಿ ಶ್ರೀ ಸತ್ಯವಿಜಯತೀರ್ಥರು ವಾಸ್ತವ್ಯವಿದ್ದರಂತೆ. ವೆಂಕೋಜಿ ಪಂತನನ್ನು ಕೆಲವು ಕಡೆ ಶ್ರೀನಿವಾಸರಾವ್ ಸಾಹೇಬ್ ಎಂದು ಕರೆದಿದ್ದಾರೆ. ಶ್ರೀ ಸತ್ಯವಿಜಯ ಚರಿತದಲ್ಲಿ ವೆಂಕಟಪತಿರಾಜನೆಂದು ಸಂಭೋದಿಸಿದೆ. ಮಹಾಸ್ವಾಮಿಗಳು ಹಾಗೂ ವೆಂಕೋಜಿ ಪಂತನು ಒಂದು ದಿನ ಸಂಜೆ

ಹರಿದ್ರಾ ನದಿಯ ದಂಡೆಯ ಮೇಲೆ ನಡೆದು ಬರುವಾಗ ದೂರದಲ್ಲಿ ಐದು ಹೆಡೆಯ ಶೇಷವನ್ನು ಇಬ್ಬರೂ ನೋಡಿದರು. ಆಗ ವೆಂಕೋಜಿಪಂತನು ತನ್ನ ಮನಗಾದ ಆಶ್ಚರ್ಯವನ್ನು ತಡೆಯಲಾರದೇ, ಮಹಾಸ್ವಾಮಿ ಇದೇನು ಆಶ್ಚರ್ಯ, ಇದರ ಸಂಕೇತವೇನೆಂದು ಕೇಳಿದನು. ಅಪರೋಕ್ಷ ಜ್ಞಾನಿಗಳಾದ ಶ್ರೀಗಳವರು, ನೀನು ನಿನ್ನ ವಾಸಸ್ಥಾನವನ್ನು ಇಲ್ಲಿಂದ ಬದಲಾಯಿಸು, ಈಗ ಕಾಲ ಸರಿಯಿಲ್ಲ, ಹೈದರಾಲಿಗೂ ಹಾಗೂ ಆರ್ಕಾಟ್ ನವಾಬನಿಗೂ ಯುದ್ಧ ನಡೆಯುವ ಸಂಭವವಿದೆ. ಆದರಿಂದ ನಿನಗೂ ವಿಪತ್ತು, ಇಲ್ಲಿಯೇ ಇದ್ದರೆ ಎಂದರು.

ಶ್ರೀ ಸತ್ಯವಿಜಯತೀರ್ಥರು ಇದಾದ ಮೇಲೆ ದಿನ ದಿನಕ್ಕೆ ನಿಶ್ಯಕ್ತಿಗೊಂಡು ಒಂದು ದಿನ ರಾತ್ರಿ ವೆಂಕಾಜಿಪಂತನನ್ನು ತಮ್ಮಲ್ಲಿ ಕರೆಸಿಕೊಂಡು, ತಮ್ಮ ಇಹದ ಕಾರ್ಯವು ಮುಗಿಯುತ್ತಾ ಬಂದಿರುವುದು, ಇನ್ನೇನು ಶ್ರೀರಾಮ ಧ್ಯಾನ ತತ್ಪರರಾಗುವುದು ಹತ್ತಿರ ಬರುತ್ತಿರುವುದು, ದೂರವಿಲ್ಲ ಎಂದು ಹೇಳಿದರು. ಶ್ರೀ ಸತ್ಯಪ್ರಿಯರಿಗೆ ಈಗಿಂದೀಗಲೇ ಸಂದೇಶವನ್ನು ಕಳುಹಿಸು, ಎಲ್ಲೇ ಇರಲಿ ತಕ್ಷಣ ಬರುವಂತೆ, ಅವರು ಬರಲು ವಿಳಂಬವಾದರೆ, ಸಂಸ್ಥಾನದ ಯಾವತ್ತು ಪೂಜಾ ವಸ್ತುಗಳನ್ನು ಬಂಗಾರದ ಮಂಟಪ, ಗಂಗಾಳ, ಶ್ರೀಮೂಲರಾಮ ಸೀತಾದೇವಿಯರನ್ನೊಳಗೊಂಡ ದೇವರ ಪೆಟ್ಟಿಗೆ ಶಾಲಿಗ್ರಾಮಾದಿಗಳ ಸಂಪುಷ್ಟವನ್ನು ಹೂತಿಡುವುದು. ಶ್ರೀ ಸತ್ಯಪ್ರಿಯ ರಿಗಲ್ಲದೇ, ಮತ್ತ್ಯಾರಿಗೂ ಕೊಡಕೂಡದೆಂದು ಆಜ್ಞಾಪಿಸಿದರು. ಮುಂದು ವರೆದು ನಾವು ಶ್ರೀರಾಮಧ್ಯಾನತತ್ಪರರಾದ ಮೇಲೆ ನಮ್ಮ ಶರೀರವನ್ನು ನಾಲ್ಕು ಜನರು ಹೊತ್ತುಕೊಂಡು ಹೋಗಿ, ನಮ್ಮ ಶರೀರದ ಭಾರವನ್ನು ಎಲ್ಲಿ ಹೊರಲಾರದೇ ಹೋಗುವದೋ, ಅಲ್ಲಿ ಇಳಿಸಿ, ಅಲ್ಲಿಯೇ ನಮ್ಮ ವೃಂದಾವನನ್ನು ಮಾಡುವುದೆಂದು ಹೇಳಿದರು. ಇದಾದ ನಂತರ, ಶ್ರೀಗಳವರು ಕ್ರಿ.ಶ. 1739ರಲ್ಲಿ ಸಲ್ಲುವ ಸಿದ್ಧಾರ್ಥ ನಾಮ ಸಂವತ್ಸರದ ಚೈತ್ರ ಬಹುಳ ಏಕಾದಶಿಯಂದು ತಮ್ಮ ದೇಹವನ್ನು ತ್ಯಜಿಸಿ ವೈಕುಂಠನಾಥನಾದ ಶ್ರೀಮೂಲರಾಮನ ಪಾದಾರವಿಂದವನ್ನು ಸೇರಿದರು. ಶ್ರೀಗಳ ಆಜ್ಞಾನುಸಾರ ಅವರ ಪಾರ್ಥಿವ ಶರೀರವನ್ನು ಹೊತ್ತು ನಡೆದಾಗ ಆಶ್ಚರ್ಯಕರವಾಗಿ ಹಿಂದೆ ಐದು ಹೆಡೆ ಶೇಷನನ್ನು ಯಾವ ಸ್ಥಳದಲ್ಲಿ ಮಹಾಸ್ವಾಮಿಗಳು ಹಾಗೂ

ವೆಂಕಾಜಿಪಂತನು ನೋಡಿದ್ದರೋ, ಅದೇ ಸ್ಥಳದಲ್ಲಿ ಶ್ರೀಗಳವರ ದೇಹ ಹೊರಲಾರದಷ್ಟು ಭಾರವಾಯಿತು. ಆಗ ನಾಲ್ಕು ಜನಹೊತ್ತ ಶರೀರವನ್ನು ಭಾರ ತಡೆಯಲಾರದೇ ಇಳಿಸಬೇಕಾಯಿತು. ಐದು ಹೆಡೆ ಶೇಷನನ್ನು ಕಂಡ ಸ್ಥಳದಲ್ಲಿ ಪಂಚಪ್ರಾಣ ರಹಿತರಾಗಿ, ಪಂಚಭೌತಿಕ ದೇಹವನ್ನು ಬಿಟ್ಟು ಬೃಂದಾವನಸ್ಥರಾದರು. ಗುರುಭಕ್ತಿಗೆ ಮತ್ತೊಂದು ಹೆಸರಾದ ವೆಂಕಾಜಿ ಪಂತನು ಗುರುಗಳ ಆಜ್ಞಾನುಸಾರ ಆ ಸ್ಥಳದಲ್ಲಿಯೇ ವೃಂದಾವನ ನಿರ್ಮಾಣ ಮಾಡಿದನು. ಆ ಅರಣ್ಯ ಪ್ರದೇಶದಲ್ಲಿ ನೂರಾರು ಜನ ಬ್ರಾಹ್ಮಣರು ವಾಸಿಸಲು ಯೋಗ್ಯವಾದ ಊರನ್ನು ಕಟ್ಟಿಸಿ ಶ್ರೀ ಸತ್ಯವಿಜಯನಗರವೆಂದು ಹೆಸರಿಸಿದರು.

ವೆಂಕಾಜಿಪಂತನು ಶ್ರೀಗಳವರ ಆಜ್ಞೆಯಂತೆ ಶ್ರೀ ಸತ್ಯಪ್ರಿಯರಿಗೆ ಚಾರರ ಕೈಯಲ್ಲಿ ಹೇಳಿಕಳುಹಿಸಿದನು. ಅಲ್ಲಿಯವರೆವಿಗೂ ಮಠದ ಸಮಸ್ತ ವಿಗ್ರಹ ಗಳನ್ನು ಪೂಜಾ ಗೃಹದಲ್ಲಿ ಹುದುಗಿಸಿದ್ದು ಆ ಸ್ಥಳದಲ್ಲಿ ನಿತ್ಯವು ತುಪ್ಪದ ದೀಪವನ್ನು ಹಚ್ಚಿ ಒಂದು ತಪ್ಪಲೆ ಅನ್ನವನ್ನು ನೈವೇದ್ಯವನ್ನು ಸಮರ್ಪಿಸು ತ್ತಿದ್ದರಂತೆ. ಶ್ರೀಸತ್ಯವಿಜಯರು ಅವರಿದ್ದ ಕಾಲದಲ್ಲಿಯೇ ವೆಂಕಾಜಿಪಂತನಿಂದ ಮಠದ ಆಭರಣ, ವಿಗ್ರಹಗಳ ಪಟ್ಟಿಮಾಡಿಸಿದ್ದರು. ಅವರ ಆಜ್ಞಾನುಸಾರ ಪಟ್ಟಿಯೂ ಮೂರು ಪ್ರತಿಗಳಲ್ಲಿ ಮಾಡಿತ್ತು. ವೆಂಕಾಜಿ ಪಂತನು ಶ್ರೀ ಸತ್ಯಪ್ರಿಯರು ಬಂದನಂತರ ಅವರ ಕೈಗೆ ಒಂದು ಪ್ರತಿಯನ್ನು ಕೊಟ್ಟನು. ಅಲ್ಲದೇ ಅದರ ಇನ್ನೊಂದು ಪ್ರತಿ ತನ್ನಲಿದೆಯೆಂದು ತೋರಿಸಿದನು. ಹಾಗೂ ಮತ್ತೊಂದು ಪ್ರತಿ ಹುದಗಿಸಿರುವ ಎಲ್ಲಾ ವಸ್ತುಗಳ ಜೊತೆ ಇದೆ ಎಂದು ಹೇಳಿದನು. ಶ್ರೀ ಸತ್ಯಪ್ರಿಯರು ತಮ್ಮ ಗುರುಗಳಿಗೆ ವಿದ್ಯುಕ್ತವಾಗಿ ಬೃಂದಾವನ ಮಾಡಿ, ಶ್ರೀಮೂಲರಾಮಸೀತಾದೇವಿಯರನ್ನು ವೈಭವದಿಂದ ಪೂಜೆಮಾಡಿ ಪಂಡಿತರಿಗೆ, ಬ್ರಾಹ್ಮಣ ಸುವಾಸಿನಿಯರಿಗೆ ತೀರ್ಥಾ ಮುದ್ರಾವನ್ನು ನೀಡಿ ಬಹು ವಿಜೃಂಭಣೆಯಿಂದ ಭೂರಿ ಭೋಜನಮಾಡಿಸಿದರು. ಅಲ್ಲದೇ ಶಿಷ್ಯಾದಿ ಗಳನ್ನು, ಭಕ್ತರನ್ನು ಉದ್ಧರಿಸಿದರು.

ಇದಕ್ಕೂ ಮುಂಚೆ ಶ್ರೀ ಸತ್ಯಪ್ರಿಯರು ಬಂದ ನಂತರ ವೆಂಕಾಜಿ ಪಂತನು ವಿನಮ್ರತೆಯಿಂದ ಶ್ರೀಗಳವರಲ್ಲಿ, ಹುದಗಿಸಿಟ್ಟಿರುವ ವಸ್ತುಗಳನ್ನು ಧ್ಯಾನಿಸಿ, ಮೇಲ್ಬಂದ ನಂತರ ತೆಗೆದುಕೊಂಡು ಪೂಜಿಸುವುದೆಂದು ಬಿನ್ನವಿಸಿ ಕೊಂಡನು. ಆಗ ಶ್ರೀ ಸತ್ಯಪ್ರಿಯರು ಶ್ರೀ ಸತ್ಯವಿಜಯರೇ ಹೀಗೆ ಹೇಳಿರಬಹು

ದೆಂದು ಭಾವಿಸಿ, ವಿಚಲಿತರಾಗಿ ವಾಪಸ್ಸು ಹೊರಟು ಹನುಮಂತಗುಡಿ ತನಕ ಬರಲು ಅವರನ್ನು ನೂರಾರು ಕಪಿಗಳು ಸುತ್ತುವರಿದು ಮುಂದೆ ಹೋಗ ದಂತಾಯಿತು. ಅಲ್ಲದೇ ದೊಡ್ಡದಾಗಿ ಬಿರುಗಾಳಿ ಎದ್ದು ತಮ್ಮನ್ನು ಆವರಿಸಿ ಕೊಂಡಂತಾಯಿತು. ಆಗ ಶ್ರೀಗಳು ವಾಯುದೇವರೇ ಶಾಸನ ಮಾಡುತ್ತಿರುವು ದಾಗಿ ಎಂದು ಬಗೆದು, ಪುನಃ ಹಿಂದುರುಗಿ ಭಕ್ತಿ ಭಾವದಿಂದ ಗುರುಗಳ ಸ್ಮರಣೆಮಾಡಿ ಪ್ರಾರ್ಥಿಸಲು ಹುದಗಿಸಿದ್ದ ಸಂಪುಟಾದಿಗಳು ತನಗೆ ತಾನೇ ಮೇಲಕ್ಕೆ ಬಂದವು.

ಶ್ರೀ ವಿಭೀಷಣ ಸಾಮ್ರಾಜ್ಯ ಪದರಾಮ ಪದಾಂಬುಜೇ
ಸಂಸಕ್ತಃ ಸತ್ಯವಿಜಯ ಹಂಸೋ ಮೇ ಭಾಸತಾಂಹೃದಿ

ಲಂಕಾಸಾಮ್ರಾಜ್ಯವನ್ನು ವಿಭೀಷಣನಿಗೆ ಕೊಟ್ಟ ಶ್ರೀರಾಮನ ಪಾದಾರ ವಿಂದಗಳಲ್ಲೇ ನಿರತರಾದ ಗುರು ಶ್ರೇಷ್ಟರಾದ ಶ್ರೀ ಸತ್ಯವಿಜಯ ಯತಿ ಪುಂಗವರಲ್ಲಿ ನನ್ನ ಮನಸ್ಸು ಸದಾ ಭಾಸವಾಗಲಿ (ಬೆಳಗಲಿ). ಶ್ರೀ ಸತ್ಯಪ್ರಿಯರಿಗೆ ಪ್ರಾಣದೇವರು ಒಲಿದಿದ್ದನೆಂದು ತಿಳಿಯಪಡಿಸುವ ಮತ್ತೊಂದು ಘಟನೆ ಮಾನಾಮಧುರೈ (ಅವರ ಮೂಲ ಬೃಂದಾವನವಿರುವ ಸ್ಥಳ) ಬಳಿ ನಡೆಯಿತಂತೆ. ಶ್ರೀಗಳವರು ಇಲ್ಲಿಗೆ ಬಂದಾಗ ತುಡಗರು ಸಂಸ್ಥಾನ ವನ್ನು ಸುತ್ತುಗಟ್ಟಿದರಂತೆ. ಮಹಾಸ್ವಾಮಿಗಳು ಗಟ್ಟಿಯಾಗಿ ಆಂಜನೇಯ ನೆಂದು ಕೂಗಿದರಂತೆ. ಆಗ ವಾನರಸೇನೆ ಕ್ಷಣದಲ್ಲಿ ಬಂದು ಕಳ್ಳರನ್ನು ಸುತ್ತುಗಟ್ಟಿತಂತೆ. ಆದ್ದರಿಂದ ಇದು ವೀರವಾನರ ಮಧುರೆಯೆಂದು ಹೆಸರಾಯಿತಂತೆ. ಕಾಲ ಕ್ರಮೇಣ ಅದು ವನ ಮಧುರೆ ಎಂದಾಯಿತಂತೆ. ಹಾಗೇ ಮುಂದುವರೆದು ಅದು ಮಾನ ಮಧುರೆಯೆಂದಾಯಿತಂತೆ.

ಶ್ರೀ ಸತ್ಯವಿಜಯತೀರ್ಥರ ವೃಂದಾವನ ತೀರ ಚಿಕ್ಕದು ಅಲ್ಲದ ದೊಡ್ಡದು ಅಲ್ಲದ ಮಟ್ಟಸವಾದ, ಬೃಂದಾವನ ಆಗಿದೆ. ವೃಂದಾವನ ಮುಂಭಾಗದಲ್ಲಿ ಒಂದು ಭಾಗದಲ್ಲಿ ಶ್ರೀ ಸತ್ಯವೀರರ ಮೃತ್ತಿಕಾ ಬೃಂದಾವನವಿದೆ. ಅಲ್ಲದೇ ಶ್ರೀರಾಘವೇಂದ್ರ ಸ್ವಾಮಿಗಳ ಬೃಂದಾವನವನ್ನು ಸ್ಥಾಪಿಸಲಾಗಿದೆ. ಇದಲ್ಲದೇ ಮತ್ತೆ ಕೆಲವು ಯತಿಗಳ ವೃಂದಾವನಗಳು ಇವೆ. ಈ ಲೇಖಕರು ಕುಲಗುರು ಗಳಾದ ಶ್ರೀ ಸತ್ಯಪರಾಯಣತೀರ್ಥರ ಅನುಗ್ರಹದಿಂದ ಶ್ರೀ ಸತ್ಯವಿಜಯರ

ವೃಂದಾವನಕ್ಕೆ ಹೋದಾಗ ಅಲ್ಲಿಯ ಅರ್ಚಕರು ಒಂದು ಹಿಡಿ ಮಂತ್ರಾಕ್ಷತೆಯನ್ನು ಅಂಗೈಗೆ ಹಾಕಿದರು. ಕೆಲವು ಕಾಳು ಮಂತ್ರಾಕ್ಷತೆ ಸಿಗುವುದೇ ದುರ್ಲಭ. ಅಂತಹದರಲ್ಲಿ ಒಂದು ಬೊಗಸೆ ಮಂತ್ರಾಕ್ಷತೆ ಸಿಕ್ಕಿತ್ತೆಂದರೆ ನನ್ನ ಪುಣ್ಯಾದಿ ಪುಣ್ಯ.

ಶ್ರೀ ಸತ್ಯವಿಜಯನಗರವು ಅರಣಿಯಿಂದ 10 ಕಿ.ಮಿ.ದೂರದಲ್ಲಿದೆ. ಆರಣಿಯು ತಮಿಳುನಾಡಿನಲ್ಲಿದೆ. ಬೆಂಗಳೂರಿನಿಂದ ಹೋಗುವವರು ಹೊಸೂರು, ಕೃಷ್ಣಗಿರಿ ಮಾರ್ಗವಾಗಿ ಆರಣಿಗೆ ಹೋಗಿ ಅಲ್ಲಿಂದ ಶ್ರೀ ಸತ್ಯವಿಜಯನಗರ ತಲುಪಬಹುದು. ರೈಲಿನಲ್ಲಿ ಹೋಗುವವರು ಕಾಟ್ಪಾಡಿಯಲ್ಲಿ ಇಳಿದು ವೇಲೂರಿಗೆ ಹೋಗಬೇಕು. ಅಲ್ಲಿ ಅವರಿಗೆ ಅನುಕೂಲವಾದರೆ ಅಲ್ಲೆ ಶ್ರೀ ವ್ಯಾಸರಾಜ ಮಠದ ಶ್ರೀ ಕಂಬಾಲೂರು ರಾಮಚಂದ್ರತೀರ್ಥರ ವೃಂದಾವನ, ಹಾಗೂ ಶ್ರೀ ಮಠದ (ಶ್ರೀಮದುತ್ತರಾದಿ) ಶ್ರೀಸತ್ಯಾಧಿರಾಜ ತೀರ್ಥರು, ಶ್ರೀ ವಿದ್ಯಾಪತಿತೀರ್ಥರ ವೃಂದಾವನ ನೋಡಿಕೊಂಡು ಆರಣಿಗೆ ಹೋಗಿ ಸತ್ಯವಿಜಯನಗರ ತಲುಪಬಹುದು. ಬೆಂಗಳೂರಿನಿಂದ ಆರಣಿ ಸುಮಾರು 240 ಕಿ.ಮಿ. ದೂರದಲ್ಲಿದೆ. ಇಲ್ಲಿಗೆ **ಹೋಗುವವರು 1/440 ಶ್ರೀ ರಾಮ ನಿವಾಸ, ಎಸ್.ಎಂ. ರಸ್ತೆ, ಸತ್ಯವಿಜಯನಗರ, ಆರಣಿ ತಾಲ್ಲೂಕು–632317 (T.N.) (1/440, Sri Sathya Vijayanagar, Rama Nivas, S.M. Road, Sathya Vijayanagar, Arni Taluk. 63217 (T.N.) Phone No. 04173-291915, Mobile : 9944463550 ಯನ್ನು ಸಂಪರ್ಕಿಸಬಹುದು.**

ಶ್ರೀ ಸತ್ಯವಿಜಯತೀರ್ಥರ ವೃಂದಾವನ ಅರಮನೆಯ ಹಿಂಬಾಗದಲ್ಲಿ ಕೌಂಡಿಣ್ಯ ನದಿ ತೀರದಲ್ಲಿದೆ. ಕೋಟೆಯ ಪ್ರತಿಯೊಂದು ಬುರುಜಿನಲ್ಲಿಯೂ ಶ್ರೀಗಳ ವೃಂದಾವನದ ಪ್ರತಿಕೃತಿಗಳು ನಿರ್ಮಿಸಲಾಗಿದೆಯಂತೆ. ಶ್ರೀ ಸತ್ಯವಿಜಯತೀರ್ಥರು ಸಕಲಾಭಿಷ್ಟಪ್ರದಾತರು. ಅವರನ್ನು ನಂಬಿದವರಿಗೆ ಸಕಲ ಮನೋರಥ ಈಡೇರುವುದು. ಶ್ರೀ ಸತ್ಯವಿಜಯರನ್ನು ನಂಬಿದಂಥ ಮನುಜರಿಗೆ ವಿಜಯ ಶಥಸಿದ್ಧ.

ಶ್ರೀ ಸತ್ಯಪೂರ್ಣತೀರ್ಥರ ಭಾಗವತ ಪ್ರವಚನವನ್ನು ಆಲಿಸಿ ಒಲಿದ
ಶ್ರೀ ರುಕ್ಮಿಣೀಸತ್ಯಭಾಮಾಸಮೇತ ಶ್ರೀ ಕೃಷ್ಣದೇವರು

ಸುಶೀಲಾ ಪ್ರಕಾಶನ
"ಭೀಮಸೇನಾ", ನಂ.52-1/71-1, ಗಾಂಧಿಬಜಾರ್
ಬೆಂಗಳೂರು-04, ದೂರವಾಣಿ : 26674242
ಮೊಬೈಲ್ : 94484 09399